WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಫೆಬ್ರವರಿ ೨, ೨೦೧೨ (ಮಾಘ ೧೩, ಶಕ ವರ್ಷ ೧೯೩೩)	ಸಂಚಿಕೆ ೫

ಭಾಗ – ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

OFFICE OF THE EXECUTIVE DIRECTOR

BANNERGHATTA BIOLOGICAL PARK, BANNERGHATTA, BANGALORE –560 0 83

NO. A2/BBP/e-Tender/Feed/CR-1/2011-12, Date : 11/ 01/ 2012

E-PROCUREMENT NOTIFICATION

Sub: Tender for Supply of various feeding materials for the Captive carnivore, omnivore wild Animals housed at different units in Bannerghatta Biological Park, Bannerghatta, Bangalore for the year 2012-13

The Executive Director, Bannerghatta Biological Park, Bannerghatta, Bangalore herein after referred as Tender Inviting Authority, has invited e-Tender from the registered contractors of this office who have registered with by the Bank Guarantee or pledging of FDRs or NSCs for ₹ 1.00 lakh for supply of various feeding materials for the captive carnivore, omnivore wild animals housed in various units of Bannerghatta Biological Park for the year 2012-13.

Those who have got the Trade License Certificate from Bruhat Bangalore Mahanagara Palike, Health Department and Certificate from the Civil Slaughter House BBMP regarding the quality of beef and other required certificates from the competitive authority for the supply of chicken, fish, egg etc are only are only eligible to participate in tender. The total procurement value put to tender is as against the each item and which may be provisional and may fluctuate. The procedure of calling, scrutinizing and finalizing this tender is as per the provisions stipulated in Karnataka Transparency in Public Procurement Acts, 1999 and all other relevant procedure laid by the government of Karnataka from time to time The details of each items in approximate quantity corresponding with approximate cost, EMD and tender processing fee is as explained in the below schedule

SCHEDULE

Unit No.	Particulars of commodity	Approximate quantity In kgs/Nos	Approximate cost of the commodities (₹. In lakhs)	EMD to be furnished (₹. In lakhs)	Tender Processing fees (₹.) (including all taxes
1.	Supply of beef to Safari	271925 kgs	200.00	20.00	As per e-procurement portal
	Supply of liver Safari	12410 kgs			
2.	Supply of beef to Zoo	32120 kgs	22.00	2.20	
	Supply of liver to Zoo	4380 kgs			

Unit No.	Particulars of commodity	Approximate quantity In kgs/Nos	Approximate cost of the commodities (₹. In lakhs)	EMD to be furnished (₹. In lakhs)	Tender Processing fees (₹.) (including all taxes
3.	Supply of beef to Rescue Center	155125 kgs	114.00	11.40	
	Supply of liver to Rescue Center	9673 kgs			
4	Supply of chicken to Zoo	4545 kgs	5.00	0.50	
5	Supply of chicken to Rescue Center	20000 kgs	22.00	2.20	
6	Supply of chicken to Safari	36360 kgs	40.00	4.00	As per e-procurement portal
7	Supply of sweet water fish to zoo a. Small fish, B. Medium fish	20000 kgs	10.00	1.00	
8	a. Live chicks,	25000 Nos.	8.25	0.825	
	b. Rabbits	2120 Nos.			
9	Eggs	10,000 Nos	3.50	0.35	
10	Milk	15,000 Ltr.	3.00	0.30	

The reputed firms/registered contractors are required to produce the scan copy the following certificates, along with the application to be eligible to get access to e-Tender.

1) Trade Licence Certificate from Bruhat Bangalore Mahanagara Palike, Health Department
2) FORM-'C' Form of Licence Certificate from Bruhat Bangalore Mahanagara Palike, Health Department
3) Certificate from the Civil Slaughter House Bruhat Bangalore Mahanagara Palike
4) Trade licence certificate for supply of eggs, chicks, chicken from the Karnataka Poultry and meat marketing federation
5) Certificate of authorised dealerships with godrej or vencob chickens for the supply of packed and fresh chicken
6) Trade licence certificate from any authorised fish farmers cooperative societies for the supply of fresh and quality fish of both small and medium size

The detailed tender notification can be had from the office of the undersigned and in the website mentioned above.

SCHEDULE OF EVENTS		
1	Tender documents will be available in e-procurement portal	12-01-2010 onwards
2	Last date and time for tender quarries and clarifications	01-03-2012
3	Last date and time for Uploading bid documents up to 4.00 P.M	12-03-2012
4	Last date and time for opening of tender at 11.30 AM in the Office of the Executive Director, Bannerghatta Biological Park, Bangalore – 560 083	15-03-2012

The accepting authority (Zoo Authority of Karnataka) reserves the right to accept or reject any or all the tenders without assigning any reasons. Further, details can be had from undersigned during office hours and also refer website www.eproc.karnataka.gov.in. The tenderers need to be registered e-procurement cell, Room No. 141, Room No. 141, Gate No. 2, 1st floor, M.S. Building, Bangalore and to obtain user ID and Password for participating in e-Tender. For more details please contact e-procurement cell – 080-25501216/25501227.

Executive Director,
Bannerghatta Biological Park,
Bannerghatta, Bangalore

PD - 08

OFFICE OF THE EXECUTIVE DIRECTOR

BANNERGHATTA BIOLOGICAL PARK, BANNERGHATTA, BANGALORE –560 0 83

NO. A2/BBP/e-Tender/Feed/CR-2/2011-12, Date : 25/ 01/ 2012

E-PROCUREMENT NOTIFICATION

Sub : Tender for Supply of various feeding materials for the Captive wild animal and birds housed at different units in Bannerghatta Biological Park, Bannerghatta, Bangalore for the year 2012-13

The Executive Director, Bannerghatta Biological Park, Bannerghatta, Bangalore herein after referred as Tender Inviting Authority, has invited e-Tender from the registered contractors of this office who have registered with by the Bank Guarantee or pledging of FDRs or NSCs for ₹ 1.00 lakh for supply of various feeding materials for the captive wild animals and birds housed in various units of Bannerghatta Biological Park for the year 2012-13.

The total procurement value put to tender is as against the each item and which may be provisional and may fluctuate. The procedure of calling, scrutinizing and finalizing this tender is as per the provisions stipulated in Karnataka Transparency in Public Procurement Acts, 1999 and all other relevant procedure laid by the government of Karnataka from time to time The details of each items in approximate quantity corresponding with approximate cost, EMD and tender processing fee is as explained in the schedule below

SCHEDULE

Unit No.	***Particulars of commodity***	***Approximate cost of the commodities (₹ In lakhs)***	***EMD to be furnished (₹In lakhs)***	***Tender Processing fees (₹) (including all taxes***
1	Supply of Food Grains, Pulses etc., to Zoo	24.15	2.41	As per e-procurement portal
2	Supply of Vegetables, Fruits etc., to Zoo	25.00	2.50	
3	Supply of Green Grass, Cattle feed to zoo and herbivore Safari	60.0	6.00	
4	Supply of Food grains, Fruits, Vegetables to Bear Safari	6.80	0.68	
5	Supply of Miscellaneous items to Zoo, Safari & Rescue Centre	3.50	0.35	

The reputed firms/registered contractors are required to produce the scan copy of the contractor registration in Bannerghatta Biological Park along with the application to be eligible to get access to e-Tender. The process of Tender is taken online as per above mentioned schedule of events. Each unit should be in a separate schedule-A form accompanied by prescribed EMD. The amount of the EMD is given against the concerned unit number in the Schedule accompanying the tender.

SCHEDULE OF EVENTS		
1	Tender documents will be available in e-procurement portal	25-01-2012 onwards
2	Last date and time for tender quarries and clarifications	20-03-2012
3	Last date and time for Uploading bid documents	23-03-2012 up to 4.00 P.M
4	Last date and time for opening of tender in the Office of the Executive Director, Bannerghatta Biological Park, Bangalore – 560 083	26-03-2012 at 11.30 AM

The accepting authority (Zoo Authority of Karnataka) reserves the right to accept or reject any or all the tenders without assigning any reasons. Further details can be had from the undersigned during office hours and also refer website www.eproc.karnataka.gov.in The tenderers need to be registered in e-procurement cell, Room No. 141, Gate No. 2, 1st floor, M.S. Building, Bangalore to obtain user ID and Password for participating in e-Tender. For more details please contact e-procurement cell – 080-25501216/25501227.

Executive Director,
Bannerghatta Biological Park,
Bannerghatta, Bangalore

PD – 09

ಜಿಲ್ಲಾಧಿಕಾರಿಯವರ ಕಛೇರಿ, ರಾಮನಗರ ಜಿಲ್ಲೆ, ರಾಮನಗರ ಇವರ ನಡವಳಿಗಳು.

ಅಧಿಸೂಚನೆ ಸಂ.ಇಎಕ್ಸ್ಇ/ಆರ್ಎನ್ಆರ್/ಸಿಬ್ಬಂದಿ/ವಾಚಾನೇನೇ/59/2011–12, ದಿನಾಂಕ:23.01.2012

ವಿಷಯ :– ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳನ್ನು ನೇರನೇಮಕಾತಿಯಿಂದ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ :– 1. ಸರ್ಕಾರದ ಪತ್ರ ಸಂ.ಆಇ/150/ಇಸಿಎಸ್/2010, ದಿನಾಂಕ: 11.03.2011.

2. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧಿಸೂಚನೆ ಸಂ.ಡಿಪಿಎಆರ್/13/ಎಸ್ ಟಿಸಿ/2001, ದಿನಾಂಕ: 21.11.2011.

3. ಸರ್ಕಾರದ ಆದೇಶ ಸಂ.ಎಫ್.ಡಿ/31/ಇಪಿಎಸ್/99, ದಿನಾಂಕ: 03.06.1999.

ಕರ್ನಾಟಕ ಸರ್ಕಾರದ ಪತ್ರ ಸಂ.ಆಇ/150/ಇಸಿಎಸ್/2010, ದಿನಾಂಕ: 11.03.2011 ರಲ್ಲಿ ರಾಮನಗರ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿನ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳಲ್ಲಿ 03 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಆರ್ಥಿಕ ಇಲಾಖೆಯಿಂದ ಸಹಮತಿ ನೀಡಿರುವುದರಿಂದ ಸದರಿ ಮೂರು ಹುದ್ದೆಗಳನ್ನು ಉಲ್ಲೇಖ(2)ರ ಅಧಿಸೂಚನೆ ಯನ್ವಯ ಹಾಗೂ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, ಪ್ರಚಲಿತ ಸರ್ಕಾರಿ ನಿಯಮಗಳು, ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ರಂತೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಈ ಕಛೇರಿಯಿಂದ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ವಿವರ:

1. ಹುದ್ದೆ ಮತ್ತು ಹುದ್ದೆಗಳ ಸಂಖ್ಯೆ:

ವಾಹನ ಚಾಲಕರ ಹುದ್ದೆ – 03

2. ಹುದ್ದೆಗಳ ವರ್ಗೀಕರಣ : ಬಿಂದು ಸಂಖ್ಯೆ 1 ರಿಂದ 3

	ಇತರೆ	ಮಹಿಳಾ	ಗ್ರಾಮೀಣ	ಮಾ.ಸೈ	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಅ) ಪ.ಜಾ.	1	–		–	–	–	–	1
ಆ) ಪ.ಪಂ	1	–	–	–	–	–	–	1
ಇ) ಪ್ರ–1	–	–	–	–	–	–	–	–
ಈ) ಪ್ರ–2(ಎ)	–	–	–	–	–	–	–	–
ಉ) ಪ್ರ–2(ಬಿ)		–	–	–	–	–	–	–
ಊ) ಪ್ರ–3(ಎ)	–	–	–	–	–	–	–	–
ಋ) ಪ್ರ–ಎ(ಬಿ)	–	–	–	–	–	–	–	–
ೠ) ಸಾ.ಅ	1	–	–	–	–	–	–	1
ಒಟ್ಟು	**3**	–	–	–	–	–	–	**3**

3. ವೇತನ ಶ್ರೇಣಿ ರೂ. 5800–100–6000–125–6500–150–7100–175–7800–200–8600–225–9500–250–10500

4. ಶೈಕ್ಷಣಿಕ ವಿದ್ಯಾರ್ಹತೆ : ಅಭ್ಯರ್ಥಿಗಳು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ 7ನೇ ತರಗತಿ ಉತ್ತೀರ್ಣರಾಗಿರಬೇಕು ಹಾಗೂ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದು.

5. ವಯೋಮಿತಿ

ಈ ಪ್ರಕಟಣೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು ಕನಿಷ್ಠ 18 ವರ್ಷ ಪೂರೈಸಿರತಕ್ಕದ್ದು ಮತ್ತು ಈ ಕೆಳಗಿನ ಗರಿಷ್ಠ ವ0ಯೋಮಿತಿಯನ್ನು ಮೀರಿರಬಾರದು.

ಎಸ್.ಸಿ	29–40
ಎಸ್.ಟಿ	29–40
ಸಾಮಾನ್ಯ	29–40

6. ಅರ್ಜಿ ಸಲ್ಲಿಸುವ ಲಕೋಟೆಯ ಮೇಲೆ ಅಬಕಾರಿ ಇಲಾಖೆಯ ವಾಹನ ಚಾಲಕರ ಹುದ್ದೆಯ ನೇಮಕಾತಿಗಾಗಿ ಅರ್ಜಿ ಎಂದು ಸ್ಪಷ್ಟವಾಗಿ ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು.

7. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.02.2012 ರ ಸಂಜೆ 5.30. ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ವಿಳಂಬವಾಗಿ ಬಂದ ಅರ್ಜಿಗಳ ಬಗ್ಗೆ ಅರ್ಜಿದಾರರೆ ಜವಾಬ್ದಾರರಾಗಿರುತ್ತಾರೆ.

ಶುಲ್ಕದ ವಿವರ ಕೆಳಕಂಡಂತಿದೆ.

ಸಾಮಾನ್ಯ ಅಭ್ಯರ್ಥಿಗಳಿಗೆ ಶುಲ್ಕ (ಪೋಸ್ಟಲ್ ಆರ್ಡರ್ ಮೂಲಕ)	ರೂ.5/–
ಪ.ಜಾತಿ/ಪ.ಪಂ/ಮಹಿಳಾ ಅಭ್ಯರ್ಥಿಗಳಿಗೆ ಶುಲ್ಕ	ಶುಲ್ಕ ರಹಿತ

8. ಅರ್ಜಿ ನಮೂನೆಯನ್ನು ಅಗತ್ಯ ದೃಢೀಕೃತ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ಅಪೂರ್ಣವಾದ ಮಾಹಿತಿ/ದಾಖಲೆಗಳಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

9. ಜಾತಿ ಮತ್ತು ಆದಾಯ ದೃಢೀಕರಣ ಪತ್ರ ಅಥವಾ ಅದರ ದೃಢೀಕೃತ ಫೋಟೋ ಕಾಪಿಗಳನ್ನು ಸಲ್ಲಿಸದಿದ್ದಲ್ಲಿ ಅಭ್ಯರ್ಥಿಯನ್ನು ಸಾಮಾನ್ಯ ಅಭ್ಯರ್ಥಿಯೆಂದು ಪರಿಗಣಿಸಲಾಗುವುದು.

10. ಭರ್ತಿ ಮಾಡಿದ ಅರ್ಜಿಗಳನ್ನು ನೋಂದಣಿ ಅಂಚೆ ಮೂಲಕ ಸಲ್ಲಿಸಬಯಸುವ ಅಭ್ಯರ್ಥಿ ಗಳು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ವಾಹನ ಚಾಲಕರ ನೇಮಕಾತಿ ಪ್ರಾಧಿಕಾರ, ಜಿಲ್ಲಾಧಿಕಾರಿಗಳ ಕಛೇರಿ, ಮಿನಿವಿಧಾನಸೌಧ, ಬಿ.ಎಂ.ರಸ್ತೆ, ರಾಮನಗರ ಜಿಲ್ಲೆ, ರಾಮನಗರ ಇವರ ವಿಳಾಸಕ್ಕೆ ಸಲ್ಲಿಸತಕ್ಕದ್ದು.

11. ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, ಪ್ರಚಲಿತ ಸರ್ಕಾರಿ ನಿಯಮ ಗಳು, ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಯಮಗಳು 2006 ರಂತೆ ನೇಮಕಾತಿ ಮಾಡಲಾಗುವುದು.

12. ಜಾತಿ ಮೀಸಲಾತಿ ಪ್ರಮಾಣ ಪತ್ರಗಳು:

ಪ.ಜಾ/ಪ.ಪಂ ಅಭ್ಯರ್ಥಿಗಳು ನಮೂನೆ 'ಡಿ' ಯಲ್ಲಿ
ಸಾಮಾನ್ಯ ಅಭ್ಯರ್ಥಿಗಳು ನಮೂನೆ 'ಎಫ್' ನಲ್ಲಿ

13. ಸ್ಥಳೀಯ ಇಬ್ಬರು ಗಣ್ಯ ವ್ಯಕ್ತಿಗಳಿಂದ ನಡತೆ ಪ್ರಮಾಣ ಪತ್ರ ಪಡೆಯತಕ್ಕದ್ದು.

14. ವಾಹನ ಚಾಲಕರ ನೇಮಕಾತಿಗೆ ಅಭ್ಯರ್ಥಿಗಳು ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರ ಹೊಂದಿರಬೇಕು ಹಾಗೂ ಶಾರೀರಿಕ ಮಟ್ಟ ದಕ್ಷತೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ (ಇದನ್ನು ಅಸಿಸ್ಟೆಂಟ್ ಸರ್ಜನ್–ಗ್ರೇಡ್ ನಂ.01, ಇದಕ್ಕಿಂತ ಕಡಿಮೆ ದರ್ಜೆಯ ಅಧಿಕಾರಿಗಳು ನೀಡಿರಬಾರದು.)

15. ಆಯ್ಕೆಯಾದ ಅಭ್ಯರ್ಥಿಗಳು ಪೊಲೀಸ್ ತರಬೇತಿ ಮತ್ತು ನಿರ್ವಹಣಾ ಶಾಲೆಯಿಂದ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.

16. ಈ ಕಛೇರಿಯು ಅಭ್ಯರ್ಥಿಯ ಅರ್ಜಿಯ ವಿಚಾರದಲ್ಲಿ ಅವರೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ವಿಳಾಸ ಬದಲಾವಣೆಯಿದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮನವಿ ಮೂಲಕ ಈ ಕಛೇರಿಯ ಗಮನಕ್ಕೆ ತರತಕ್ಕದ್ದು. ವಿಳಾಸ ಬದಲಾವಣೆಯನ್ನು ಪರಿಗಣಿಸುವ ಬಗ್ಗೆ ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

17. ವ್ಯಕ್ತಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ತಿದ್ದಿದ ದಾಸ್ತಾವೇಜುಗಳನ್ನು ಸಲ್ಲಿಸಿರುವುದು ಇಲ್ಲವೆ ಸುಳ್ಳು ಹೇಳಿಕೆ ನೀಡಿರುವುದು ಖಚಿತವಾದಲ್ಲಿ ಕ್ರಿಮಿನಲ್ ಪ್ರಕರಣಕ್ಕೆ ಅಥವಾ ಶಿಸ್ತು ಪ್ರಕರಣಕ್ಕೆ ಒಳಪಡಿಸುವುದಲ್ಲದೆ ಹುದ್ದೆಯ ಆಯ್ಕೆಯಿಂದ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು.

ಕರಡು ಮಾನ್ಯ ಜಿಲ್ಲಾಧಿಕಾರಿಗಳಿಂದ
ಅನುಮೋದಿಸಲ್ಪಟ್ಟಿದೆ

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ವಾಹನ ಚಾಲಕರ ನೇಮಕಾತಿ ಪ್ರಾಧಿಕಾರ,
ರಾಮನಗರ ಜಿಲ್ಲೆ, ರಾಮನಗರರವರ ಪರವಾಗಿ.

ಅಬಕಾರಿ ಇಲಾಖೆ

ಜಿಲ್ಲಾಧಿಕಾರಿಗಳ ಕಛೇರಿ, ರಾಮನಗರ ಜಿಲ್ಲೆ, ರಾಮನಗರ

ದೂರವಾಣಿ ಸಂಖ್ಯೆ: 080–7273777/7271059/7271055

ಸಂ.ಇಎಕ್ಸ್ಇ/ಆರ್‌ಎನ್‌ಆರ್/ಸಿಬ್ಬಂದಿ/ವಾಚಾನೇನೇ/59/2011–12 ದಿನಾಂಕ:23.01.2012

ಅಧಿಸೂಚನೆ

ಕರ್ನಾಟಕ ಸರ್ಕಾರದ ಪತ್ರ ಸಂ.ಆಇ/150/ಇಸಿಎಸ್/2010, ದಿನಾಂಕ: 11.03.2011 ರಲ್ಲಿ ರಾಮನಗರ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ 3 ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಆರ್ಥಿಕ ಇಲಾಖೆಯಿಂದ ಸಹಮತಿ ನೀಡಿರುವುದರಿಂದ ಸದರಿ ಮೂರು ಹುದ್ದೆಗಳನ್ನು ಉಲ್ಲೇಖ(2)ರ ಅಧಿಸೂಚನೆ ಯನ್ವಯ ಹಾಗೂ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳು, ಪ್ರಚಲಿತ ಸರ್ಕಾರಿ ನಿಯಮಗಳು, ಕರ್ನಾಟಕ ನಾಗರೀಕ ಸೇವಾ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ರಂತೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಈ ಕಛೇರಿಯಿಂದ ನಿಗದಿಪಡಿಸಿದ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಹುದ್ದೆಗಳ ವಿವರ:

1. ಹುದ್ದೆ ಮತ್ತು ಹುದ್ದೆಗಳ ಸಂಖ್ಯೆ:

ವಾಹನ ಚಾಲಕರ ಹುದ್ದೆ – 03

2. ಹುದ್ದೆಗಳ ವರ್ಗೀಕರಣ : ಬಿಂದು ಸಂಖ್ಯೆ 1 ರಿಂದ 3

	ಇತರೆ	ಮಹಿಳಾ	ಗ್ರಾಮೀಣ	ಮಾ.ಸೈ	ಕ.ಮಾ.ಅ	ಯೋ.ಅ	ಅಂ.ವಿ	ಒಟ್ಟು
ಅ) ಪ.ಜಾ.	1	–		–	–	–	–	1
ಆ) ಪ.ಪಂ	1	–	–	–	–	–	–	1
ಇ) ಪ್ರ–1	–	–	–	–	–	–	–	–
ಈ) ಪ್ರ–2(ಎ)	–	–	–	–	–	–	–	–
ಉ) ಪ್ರ–2(ಬಿ)		–	–	–	–	–	–	–
ಊ) ಪ್ರ–3(ಎ)	–	–	–	–	–	–	–	–
ಋ) ಪ್ರ–ಎ(ಬಿ)	–	–	–	–	–	–	–	–
ೠ) ಸಾ.ಅ	1	–	–	–	–	–	–	1
ಒಟ್ಟು	**3**	–	–	–	–	–	–	**3**

3. ವೇತನ ಶ್ರೇಣಿ ರೂ. 5800–100–6000–125–6500–150–7100–175–7800–200– 8600–225–9500–250–10500

4. **ಶೈಕ್ಷಣಿಕ ವಿದ್ಯಾರ್ಹತೆ :** ಅಭ್ಯರ್ಥಿಗಳು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ 7ನೇ ತರಗತಿ ಉತ್ತೀರ್ಣರಾಗಿರಬೇಕು ಹಾಗೂ ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆಯನ್ನು ಪರಿಗಣಿಸಲಾಗುವುದು.

5. ವಯೋಮಿತಿ

ಈ ಪ್ರಕಟಣೆಯ ದಿನಾಂಕಕ್ಕೆ ಅಭ್ಯರ್ಥಿಯ ವಯಸ್ಸು ಕನಿಷ್ಠ 18 ವರ್ಷ ಪೂರೈಸಿರತಕ್ಕದ್ದು ಮತ್ತು ಈ ಕೆಳಗಿನ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು

ಎಸ್.ಸಿ	29–40
ಎಸ್.ಟಿ	29–40
ಸಾಮಾನ್ಯ	29–40

6. ಭರ್ತಿ ಮಾಡಿದ ಅರ್ಜಿಗಳನ್ನು **" ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು, ವಾಹನ ಚಾಲಕರ ನೇಮಕಾತಿ ಪ್ರಾಧಿಕಾರ, ಮಿನಿವಿಧಾನಸೌಧ, ಬಿ.ಎಂ.ರಸ್ತೆ, ರಾಮನಗರ ಜಿಲ್ಲೆ, ರಾಮನಗರ"** ಇವರಿಗೆ ಖುದ್ದಾಗಿ ಇಲ್ಲವೆ ಅಂಚೆ ಮೂಲಕ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ಇವರಿಗೆ ಸಂದಾಯವಾಗುವಂತೆ ಸಾಮಾನ್ಯ ಅಭ್ಯರ್ಥಿಗಳು ರೂ.5/–ಗಳ ಪೋಸ್ಟಲ್ ಆರ್ಡರ್ ನೊಂದಿಗೆ(ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಅರ್ಜಿ ಶುಲ್ಕವಿರುವುದಿಲ್ಲ) ಅಗತ್ಯ ದಾಖಲೆಗಳ ಸಮೇತ ಸಲ್ಲಿಸುವುದು.

7. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23.**02.2012ರಂದು ಸಂಜೆ. 5.30 ಘಂಟೆ0ಯೊಳಗೆ.**

ಹೆಚ್ಚಿನ ಮಾಹಿತಿ ಹಾಗೂ ಅರ್ಜಿ ನಮೂನೆಗಾಗಿ ಈ ಕಛೇರಿಯ ಇದೇ ದಿನಾಂಕ ದಂದು ಹೊರಡಿಸಿರುವ ಅಧಿಸೂಚನೆಯನ್ನು ಈ ಕಛೇರಿ/ಡೆಪ್ಯುಟಿಕಮೀಷನರ್ ಆಫ್ ಎಕ್ಸೈಸ್, ಎಲ್ಲಾ ವಲಯ ಅಬಕಾರಿ ನಿರೀಕ್ಷಕರುಗಳ ಕಛೇರಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಿರುವುದನ್ನು ಹಾಗೂ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವುದನ್ನು ನೋಡಬಹುದಾಗಿರುತ್ತದೆ.

ಕರಡು ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದಿಸಲ್ಪಟ್ಟಿದೆ }

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ವಾಹನ ಚಾಲಕರ ನೇಮಕಾತಿ ಪ್ರಾಧಿಕಾರ,
ರಾಮನಗರ ಜಿಲ್ಲೆ, ರಾಮನಗರರವರ ಪರವಾಗಿ.

ರಾಮನಗರ ಜಿಲ್ಲೆಯ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ ವಾಹನ ಚಾಲಕರ ಹುದ್ದೆಗಳ ನೇಮಕಾತಿಗಾಗಿ ಅರ್ಜಿ ನಮೂನೆ.

1	ಅರ್ಜಿದಾರರ ಪೂರ್ಣ ಹೆಸರು (ದಪ್ಪ ಅಕ್ಷರಗಳಲ್ಲಿ)	
2	ಅ) ಪೂರ್ಣ ಅಂಚೆ ವಿಳಾಸ	
	ಆ) ಖಾಯಂ ವಿಳಾಸ	
3	ವಿದ್ಯಾರ್ಹತೆ	
4	ಹುಟ್ಟಿದ ದಿನಾಂಕ ಮತ್ತು ವಯಸ್ಸು (ದಿನಾಂಕ: 01.01.2012ಕ್ಕೆ)	
5	ಜಾತಿ : (ಪ.ಜಾತಿ/ಪ.ಪಂ/ಪ್ರವರ್ಗ–1, 2ಎ, 2ಬಿ, 3ಎ ಹಾಗೂ 3ಬಿ)	
6	ವಾಹನದ ಲೈಸನ್ಸ್ ಬಗ್ಗೆ ವಿವರ	
7	ಇತರೆ ವಿವರ	
8	ಇತರೆ ಜಿಲ್ಲೆಗೂ ಅರ್ಜಿ ಸಲ್ಲಿಸಿದ್ದಲ್ಲಿ ಮಾಹಿತಿ ನೀಡುವುದು.	

ಅಭ್ಯರ್ಥಿಯ ಸಹಿ/–

ಷರತ್ತುಗಳು:

1. 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ದೃಢೀಕೃತ ಅಂಕಪಟ್ಟಿ ಲಗತ್ತಿಸಬೇಕು.
2. ಅಭ್ಯರ್ಥಿಯ ವಯಸ್ಸು ದಿನಾಂಕ: 01.01.2012ಕ್ಕೆ 18 ವರ್ಷ ತುಂಬಿರಬೇಕು ಮತ್ತು ಸಾಮಾನ್ಯ ಅಭ್ಯರ್ಥಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ 40 ವರ್ಷ ಮೀರಿರಬಾರದು. ಜನ್ಮ ದಿನಾಂಕದ ದೃಢೀಕೃತ ಪ್ರಮಾಣ ಪತ್ರ ಲಗತ್ತಿಸಬೇಕು.

3. ಚಾಲ್ತಿಯಲ್ಲಿರುವ ವಾಹನ ಚಾಲಕ ಲೈಸನ್ಸ್ ಅನ್ನು ಮತ್ತು ಪ್ರಥಮ ಚಿಕಿತ್ಸಾ ಪ್ರಮಾಣ ಪತ್ರವನ್ನು ಹೊಂದಿರಬೇಕು ಹಾಗೂ ಶಾರೀರಿಕ ಮಟ್ಟ ದಕ್ಷತೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಇದನ್ನು ಅಸಿಸ್ಟೆಂಟ್ ಸರ್ಜನ್ (ಗ್ರೇಡ್ ನಂ.1) ಇದಕ್ಕಿಂತ ಕಡಿಮೆ ದರ್ಜೆಯ ಅಧಿಕಾರಿಗಳು ನೀಡಿರಬಾರದು ದೃಢೀಕೃತ ಜೆರಾಕ್ಸ್ ಪ್ರತಿ ಲಗತ್ತಿಸಬೇಕು.
4. ಅಭ್ಯರ್ಥಿಯು ಆಯ್ಕೆಯಾದ ನಂತರ ಪೊಲೀಸ್ ಡ್ರೈವಿಂಗ್ ಮತ್ತು ನಿರ್ವಹಣಾ ಶಾಲೆಯಲ್ಲಿ ನಡೆಸಲಾದ ಪರೀಕ್ಷೆಯ ದೃಢೀಕರಣ ಪತ್ರದ ಜೆರಾಕ್ಸ್ ಪ್ರತಿಯನ್ನು ನೀಡಬೇಕು.
5. ಸ್ಥಳೀಯ ಇಬ್ಬರು ಗಣ್ಯರಿಂದ ನಡತೆ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.
6. ಅರ್ಜಿಯ ಎಲ್ಲಾ ಕಾಲಂಗಳನ್ನು ತುಂಬತಕ್ಕದ್ದು.
7. ಅಪೂರ್ಣಗೊಂಡ ಅರ್ಜಿಯನ್ನು ಹಾಗೂ ಕೊನೆಯ ದಿನಾಂಕದ ನಂತರದ ಅರ್ಜಿಯನ್ನು ಮಾನ್ಯ ಮಾಡಲಾಗುವುದಿಲ್ಲ.
8. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 23.02.2012 ರ ಸಂಜೆ 5.30ರೊಳಗಾಗಿ
9. ರೂ.5/– ಪೋಸ್ಟಲ್ ಆರ್ಡರ್ ಲಗತ್ತಿಸುವುದು.
10. ಅರ್ಜಿ ಸಲ್ಲಿಸಬೇಕಾದ ವಿಳಾಸ:

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು,
ವಾಹನ ಚಾಲಕರ ನೇಮಕಾತಿ ಪ್ರಾಧಿಕಾರ,
ಮಿನಿವಿಧಾನಸೌಧ, ಬಿ.ಎಂ.ರಸ್ತೆ,
ರಾಮನಗರ ಜಿಲ್ಲೆ, ರಾಮನಗರ.

ಪಿ.ಆರ್. 24

FORM-IV

(SEE RULE-12)

NOTICE

It is hereby notified that the undersigned has changed his/her name from **MANJUNATHAPPA to M. MANJUNATH GOWDA.**

P.D. c/n. 09 **MANJUNATHAPPA**

FORM-I

(SEE RULE-9)

Department of Women & Child Development

Office of the Directorate, 1st Floor, M. S. Building, Dr. Ambedkar, Veedhi, Bangalore560 001

No. NISIPRA/HE. BA.ANU/102/2010-2011, Dated : 02-12-2011

NOTIFICATION

Sri S. Halappa working as First Division Assistant in the Department of Women and Child Development, Office of the Child Development Project Officer. Davanagere Taluk, Davanagere District is permitted to change his name as ``S. Haleshappa" with immediate effect.

Director,
Women & Child Development Department,
Bangalore

P.D. c/n. 04

FORM-I

(SEE RULE-9)

Department of Police

Office of the Commandent IInd Bn, K.S.R.P. Belgaum, Dated : 06th January 2012

NOTIFICATION

Sir Bapugoud. D. working as Police Constable Department of/Office of the Commandant IInd BN K.S.R.P. Belgaum is permitted to change his/her name to **Bapugoud. Desaigouda. Kulkarni**.

Commandant

P.D. c/n. 05 IInd. Bn. K.S.R.P. Belgaum.

FORM-IV

(SEE RULE-12)

NOTICE

It is hereby notified that the undersigned has changed his name from **Basappa Hanamantappa Devakki** to **Basappa Hanamantappa Burlagatti.**

P.D.c/n. 06 **Basappa Hanamantappa Devakki**

FORM-I

(SEE RULE-9)

Department of Health and Family Welfare

No. HFW 497 HSH 2011, Bangalore, Dated : 23rd November, 2011

NOTIFICATION

Dr. G. Srinivasappa working as Taluk Health Officer in the Malur Taluk, Kolar District, Department of Health and Family Welfare, Office of the Health & Family Welfare is permitted to change his name to **Dr. G. Srinivas**.

Chikkegowda,

Under Secretary to Government

P.D.c/n. 07 Health & Family Welfare Department (Services)

FORM-I

(SEE RULE-9)

Department of Police

Office of the, Superintendent of Police, Bijapur, Dated : 12th January, 2012.

NOTIFICATION

Shri **Ramu. A. Lamani,** working as ASI in the Kalakeri Police Station office of The Superitendent of Police, Bijapur District is permitted to change his Name to **Ramappa. A. Rathod**.

P.D.c/n .08 Superintendent of Police, Bijapur

PROCEEDINGS OF THE KARNATAKA STATE BOARD OF WAKFS

Sub:- Assumption of Hazrath Syed Ahmed Shah Khadri @ Gujrathi Basha Dargah, Azad Road, Hassan,under direct management of the Board- Appointment of Administrator- regarding.

Ref:- Board's resolution on Subject no.7 in its meeting held on 29-10-2011.

PREAMBLE:-

Hazrath Syed Ahmed Shah Khadri @ Gujrathi Basha Dargah,Azad Road, Hassan, is a Wakf institution notified in the Gazette dated 09-11-1964. The said institution is managed by a managing Committee constituted by the Board for a period of three (3) years vide Order.No.KTW /CMC/7 /HSN/2010-11 dated 21-6-2011.

In the meantime a representation was submitted by the local residents of Hassan, City, requesting to withdraw the Boards ' order dtd. 21-6-2011 and proposed to take the institution under direct management & to appoint an Administrator to the above said Wakf.

Hence the matter was placed before the Board in its meeting held on 19-9-2011 for decision in this regard. The Board, after deliberation resolved to authorize Chief Executive Officer, Karnataka State Board of Wakfs, to appoint a suitable Govt.Officer/Official as Administrator to the said Wakf. Accordingly it was decided to appoint an Officer as Administrator to the above said Wakf. Hence this order.

ORDER NO.KTW/CMC/7/HSN/2010-11 DATED 25-11-2011

In view of the facts mentioned in the preamble and in exercise of the powers conferred under section 65 of the Wakf Act 1995, the Karnataka State Board of Wakfs hereby assumes the management of Hazrath Syed Ahmed Shah Khadri @ Gujrathi Basha Dargah, Azad Road, Hassan, under direct management of the Board and appoints Sri.Syed Hafeez-Ur-Rehman S/o Sri. Syed Dastagi, E.C.O Urdu, B.E.O Office, Hassan District as its Administrator for a period of one year, or until further orders.

The Administrator shall function in accordance with the Wakf Act 1995 and Karnataka Wakf Rules 1997 & the directions issued by the Karnataka State Board of Wakfs, Bengaluru from time to time.

S. Anees Siraj
Chief Executive Officer,
Karnataka State Board of Wakfs,

PD 01

IN THE COURT OF THE IV ADDL. CITY CIVIL JUDGE MAYO HALL BANGALORE: CCH-21

G & WC. No. 25006/2011, H.G. 15-02-12

PETITIONERS:

1. Master. D.Tejas, S/o Devanand P, Aged about 11 years, since minor represented by his natural and biological guardian his father Sri. Devanand. P.
2. Sri. Devanand.P, S/o Prahalad, aged about 42 years, residing at No.475 •. :2nd Main, M.M.Layout, KavalBysandra,.R.T.Nagar Post, Bangalore-32.

V/s

RESPONDENT: NIL

PUBLIC NOTICE

Notice is hereby given that a petition has been made to this Court under section 29 of the guardian and wards act, R/w Section 8 of the Hindu minority guardianship act 1956 seeking permission to the 2nd petitioner to sell the schedule properties on behalf of the 1st petitioner aforesaid to the intending purchaser by name one Balaji or any other parties if the said purchaser fails to purchase the same.

Be it known that No caveat has been entered and the said petition is posted for hearing on 15.2.12 at 11' O clock. Any person's claiming to have any interest may come and participate in the proceedings before grant probate.

SCHEDULE

ITEM NO.1:

All that piece and parcel of residential immovable property bearing khatha No.218/A situated at Subbaianapalya, Krishnarajapura Hobli, Bangalore east Taluk, presently comes within the limits of Bangalore Mahanagara Palike, Bangalore, measuring East to west 11 feet and North to South 10 feet in total measuring 110 sq feet and bounded by:

East by: Narayanaswamy's House, West by: Road, North by: Nagaiah's Property, South by: Munithimmaiah's Property.

ITEM NO.2:

All that piece and parcel . of residential immovable property bearing khatha No.218 situated at Subbaianapalya, Krishnarajapura Hobli, Bangalore east Taluk. presently comes within the limits of Bangalore Mahanagara Palike, Bangalore, and measuring East to West 11 feet and North to South 15 feet in total measuring 165 sq feet and bounded by:

East by: Narayanaswamy's House, West by: Road, north by: Munisonnappa's House, South by: Passage .and Thimakka's House.

Given under my hand and the seal of the Court, this the 12th day of Jan 2011.

By order of the Court,

Assistant Registrar,

PD 04 City Civil Court, Mayohall Unit, Bangalore.

ಕರ್ನಾಟಕ ಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560 001.

ಸಂಖ್ಯೆ: ಆರ್(2)907/2011–12–/ಪಿಎಸ್‌ಸಿ, ದಿನಾಂಕ: 18–01–2012

ಅಧಿಸೂಚನೆ

1. ಆಯೋಗವು ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು 2006 ರಡಿಯಲ್ಲಿ ಕೆಳಕಂಡ **ತಾಂತ್ರಿಕ, ತಾಂತ್ರಿಕೇತರ ಮತ್ತು** ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ತುಂಬದೇ ಇರುವ ಸ್ಥಾನಗಳು) (ವಿಶೇಷ ನೇಮಕಾತಿ) ನಿಯಮಗಳು 2001ರನ್ವಯ **ಬ್ಯಾಕ್‌ಲಾಗ್** ಹುದ್ದೆಗಳನ್ನು ಭರ್ತಿ ಮಾಡಲು **ON-LINE ಮೂಲಕ** ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ:–

ಭಾಗ–1:– ಗ್ರೂಪ್–ಎ, ಬಿ ಮತ್ತು ಸಿ ತಾಂತ್ರಿಕ ಹುದ್ದೆಗಳು

ಕ್ರಮ ಸಂಖ್ಯೆ	ಇಲಾಖೆಯ ಹೆಸರು ಮತ್ತು ಪದನಾಮ	ಹುದ್ದೆಗಳ ಸಂಖ್ಯೆ
ಗ್ರೂಪ್ – ‘ ಎ ’ ತಾಂತ್ರಿಕ ಹುದ್ದೆಗಳು		
01	ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಗ್ರೂಪ್ ಎ ಕಿರಿಯ ಶ್ರೇಣಿಯ ಜಿಲ್ಲಾ ಶಿಕ್ಷಣಾಧಿಕಾರಿಗಳು	20
ಗ್ರೂಪ್ – ‘ ಬಿ ’ ತಾಂತ್ರಿಕ ಹುದ್ದೆಗಳು		
02	ಮುಖ್ಯ ವಿದ್ಯುತ್ ಪರಿವೀಕ್ಷಣಾಲಯದಲ್ಲಿನ ಸಹಾಯಕ ವಿದ್ಯುತ್ ಪರಿವೀಕ್ಷಕರು	35
03	ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿನ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ	10
04	ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಮುಖ್ಯ ಗ್ರಂಥಾಲಯಾಧಿಕಾರಿ	05
05	ಕರ್ನಾಟಕ ಗೃಹ ಮಂಡಳಿಯಲ್ಲಿನ ಸಹಾಯಕ ಅಭಿಯಂತರರು (ಸಿವಿಲ್)	02
06	ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿನ ಪರಿವೀಕ್ಷಣಾಧಿಕಾರಿ ದರ್ಜೆ–1	35
ಗ್ರೂಪ್ – ‘ ಸಿ ’ ತಾಂತ್ರಿಕ ಹುದ್ದೆಗಳು		
07	ಎನ್.ಸಿ.ಸಿ. ನಿರ್ದೇಶನಾಲಯದಲ್ಲಿನ ಏರೋ ಮಾಡೆಲಿಂಗ್ ಇನ್ಸ್‌ಟ್ರಕ್ಟರ್ಸ್	05
08	ಎನ್.ಸಿ.ಸಿ. ನಿರ್ದೇಶನಾಲಯದಲ್ಲಿನ ಶಿಪ್ ಮಾಡೆಲಿಂಗ್ ಇನ್ಸ್‌ಟ್ರಕ್ಟರ್ಸ್	04
09	ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಗ್ರಂಥಪಾಲಕರು	05
10	ಕರ್ನಾಟಕ ಗೃಹ ಮಂಡಳಿಯಲ್ಲಿನ ಕಿರಿಯ ಅಭಿಯಂತರರು	04
11	ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿನ ಜವಳಿ ತನಿಖಾಧಿಕಾರಿ	07
12	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಪ್ರೂಫ್ ರೀಡರ್	01

ಕ್ರಮ ಸಂಖ್ಯೆ	ಇಲಾಖೆಯ ಹೆಸರು ಮತ್ತು ಪದನಾಮ	ಹುದ್ದೆಗಳ ಸಂಖ್ಯೆ
13	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಪ್ರೂಫ್ ಪ್ರೆಸ್ ಮ್ಯಾನ್	01
14	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಕಾಪಿ ಹೋಲ್ಡರ್	01
15	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಬೈಂಡರ್	02
16	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಪ್ರಿಂಟರ್	01
17	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಸ್ಪೀಚ್ ಥೆರಾಪಿಸ್ಟ್ ,	01
18	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಆಕ್ಯೂಪೇಷನಲ್ ಥೆರಾಪಿಸ್ಟ್/ ಫಿಸಿಯೋಥೆರಾಪಿಸ್ಟ್,	02
19	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಮ್ಯೂಸಿಕ್ ಟೀಚರ್ (ವೋಕಲ್ / ಇನ್ಸ್ಟ್ರುಮೆಂಟಲ್) ಗ್ರೇಡ್–2,	04
20	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಮ್ಯೂಸಿಕ್ ಟೀಚರ್ ಗ್ರೇಡ್–3	02
21	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಓರಿಯೆಂಟೇಷನ್ ಮತ್ತು ಮೊಬಲಿಟಿ ಇನ್ಸ್ಟ್ರಕ್ಟರ್ ಗ್ರೇಡ್–2	03
22	ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ನಲ್ಲಿ ಪದವೀಧರ ಇಂಜಿನಿಯರ್ (ಮೆಕ್ಯಾನಿಕಲ್)	02
23	ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ನಲ್ಲಿ ಪದವೀಧರ ಇಂಜಿನಿಯರ್ (ಎಲೆಕ್ಟ್ರಿಕಲ್)	06
24	ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ನಲ್ಲಿ ಫೋರ್‌ಮೆನ್ (ಮೆಕ್ಯಾನಿಕಲ್)	02
25	ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ನಲ್ಲಿ ಫೋರ್‌ಮೆನ್ (ಎಲೆಕ್ಟ್ರಿಕಲ್)	08

ಭಾಗ–2:– ಗ್ರೂಪ್–'ಬಿ' ಮತ್ತು ' ಸಿ ' ತಾಂತ್ರಿಕೇತರ ಹುದ್ದೆಗಳು

	ಗ್ರೂಪ್–'ಬಿ' ತಾಂತ್ರಿಕೇತರ ಹುದ್ದೆಗಳು	
26	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿನ ಸಹಾಯಕ ಕಾರ್ಯದರ್ಶಿ	04
27	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿನ ಸಂರಕ್ಷಣಾಧಿಕಾರಿ	24
	ಗ್ರೂಪ್–'ಸಿ' ತಾಂತ್ರಿಕೇತರ ಹುದ್ದೆಗಳು	
28	ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಸಹಾಯಕ ಗ್ರಂಥಪಾಲಕರು	10
29	ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಗ್ರಂಥಾಲಯ ಸಹಾಯಕರು	20

ಭಾಗ–3:– ಗ್ರೂಪ್ ' ಎ ' ಮತ್ತು 'ಬಿ' ಬ್ಯಾಕ್‌ಲಾಗ್ ಹುದ್ದೆಗಳು

	ಗ್ರೂಪ್ ' ಎ ' ಬ್ಯಾಕ್‌ಲಾಗ್ ಹುದ್ದೆ	
30	ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿನ ಬಂದರು ಅಧಿಕಾರಿ/ಉಪ ನಿರ್ದೇಶಕರು	01
	ಗ್ರೂಪ್ ' ಬಿ ' ಬ್ಯಾಕ್‌ಲಾಗ್ ಹುದ್ದೆ	
31	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿನ ಸಹಾಯಕ ನಿರ್ದೇಶಕರು	02

ಟಿಪ್ಪಣಿ: ಅನುಸೂಚಿಯಲ್ಲಿ ತಿಳಿಸಿರುವ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣವು ಅನಿವಾರ್ಯ ಸಂದರ್ಭದಲ್ಲಿ ಬದಲಾವಣೆಗೆ ಒಳಪಟ್ಟಿರುತ್ತದೆ.

ಅಭ್ಯರ್ಥಿಗಳು ಒಂದು ಹುದ್ದೆಗೆ ಒಂದೇ ಅರ್ಜಿ ಸಲ್ಲಿಸತಕ್ಕದ್ದು, ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅಂತಹ ಅರ್ಜಿಗಳನ್ನು ಯಾವುದೇ ಮುನ್ಸೂಚನೆಯಿಲ್ಲದೇ ತಿರಸ್ಕರಿಸಲಾಗುವುದು.

ಅರ್ಜಿಗಳನ್ನು ಆನ್–ಲೈನ್ (ON-LINE) (ಎಲೆಕ್ಟ್ರಾನಿಕ್ ಮಾರ್ಗ) ಮುಖಾಂತರ ಮಾತ್ರ ಸಲ್ಲಿಸತಕ್ಕದ್ದು, ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.

1) ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡಲು On-Line ನಲ್ಲಿ ನೀಡಿರುವ ಸೂಚನೆಗಳನ್ವಯ ಭರ್ತಿ ಮಾಡತಕ್ಕದ್ದು.

2) ಅಭ್ಯರ್ಥಿಗಳು ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಆಯೋಗವು ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳುವುದು.

ವಿಶೇಷ ಸೂಚನೆ:– ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದ್ದಲ್ಲಿ, ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಶುಲ್ಕವನ್ನು ಪಾವತಿಸತಕ್ಕದ್ದು.

2. ಶುಲ್ಕ:–

ಸಾಮಾನ್ಯ ಅರ್ಹತೆ, ಪ್ರವರ್ಗ 2(ಎ), 2(ಬಿ), 3(ಎ), 3(ಬಿ) ಗೆ ಸೇರಿದ ಅಭ್ಯರ್ಥಿಗಳಿಗೆ	₹ 300/–
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಮತ್ತು ಅಂಗವಿಕಲ ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ	₹ 25/–
ಬ್ಯಾಕ್‌ಲಾಗ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಯಾವುದೇ ಶುಲ್ಕವನ್ನು ಪಾವತಿಸುವಂತಿಲ್ಲ.	

2.1 ನಿಗದಿತ ಶುಲ್ಕವನ್ನು ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಗಳಲ್ಲಿ ಚಲನ್ ನೀಡಿ ಹಣ ಪಾವತಿಸತಕ್ಕದ್ದು. ಈ ಸಂಬಂಧ ON-LINE ನಲ್ಲಿ ಅರ್ಜಿ ಸಲ್ಲಿಸಿ ಬ್ಯಾಂಕಿನ ಚಲನ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ನಿಗದಿಪಡಿಸಿದ ಮೊಬಲಗನ್ನು ಸಂಬಂಧಿಸಿದ ಬ್ಯಾಂಕ್‌ಗೆ ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ಪಾವತಿಸತಕ್ಕದ್ದು. ಇದನ್ನು ಹೊರತುಪಡಿಸಿ ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.

3. ಅಭ್ಯರ್ಥಿಗಳು **ONLINE** ಮೂಲಕ ಅರ್ಜಿ ಭರ್ತಿ ಮಾಡುವ ಮೊದಲು ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ತಿಳಿದುಕೊಳ್ಳತಕ್ಕದ್ದು

ಹಂತ–1

(1) ಅಭ್ಯರ್ಥಿಗಳು ಅಧಿಸೂಚನೆ ಹಾಗೂ ಸೂಚನೆಗಳನ್ನು ತಪ್ಪದೇ ಓದಿಕೊಂಡ ನಂತರ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

(2) ಆಯೋಗದ ವೆಬ್ ಸೈಟ್ "http://kpsc.kar.nic.in" ನ Home page ನಲ್ಲಿ On-line Application for Technical/Non-Technical/Backlog Posts (ತಾಂತ್ರಿಕ/ತಾಂತ್ರಿಕೇತರ/ಬ್ಯಾಕ್‌ಲಾಗ್ ಹುದ್ದೆಗಳು) ಮೇಲೆ ಕ್ಲಿಕ್ ಮಾಡಿದ ನಂತರ Open Application Form ಮೇಲೆ ಕ್ಲಿಕ್ ಮಾಡುವುದು.

(3) ಅರ್ಜಿ ಸಲ್ಲಿಸಬೇಕಿರುವ ಹುದ್ದೆಗಳ ಗುಂಪನ್ನು ಆರಿಸಿಕೊಂಡ ನಂತರ Apply button ಅನ್ನು ಕ್ಲಿಕ್ ಮಾಡಿ, ಯಾವ ಹುದ್ದೆಗಾಗಿ ಅರ್ಜಿ ಸಲ್ಲಿಸುತ್ತಿರುವುದಾಗಿ ಆರಿಸಿಕೊಂಡ ನಂತರ Apply button ಮೇಲೆ ಕ್ಲಿಕ್ ಮಾಡುವುದು.

(4) ಈಗ ಪರದೆಯ ಮೇಲೆ ಅರ್ಜಿಯ ನಮೂನೆಯು ಮೂಡುತ್ತದೆ. ಆಗ ಅಭ್ಯರ್ಥಿಯು ಎಲ್ಲಾ ವಿವರಗಳನ್ನು ಭರ್ತಿ ಮಾಡುವುದು. ಅರ್ಜಿಯಲ್ಲಿ ಭರ್ತಿ ಮಾಡಿದ ಎಲ್ಲಾ ವಿವರಗಳು ಪರದೆಯ ಮೇಲೆ ಮೂಡುತ್ತದೆ.

(5) ಅಭ್ಯರ್ಥಿಗಳು ಎಲ್ಲಾ ವಿವರಗಳನ್ನು ಭರ್ತಿ ಮಾಡಿದ ನಂತರ Preview button ಮೇಲೆ ಕ್ಲಿಕ್ ಮಾಡಿದ ನಂತರ Preview Page ಮೂಡುತ್ತದೆ.

(6) ಅಭ್ಯರ್ಥಿಗೆ Application ID ಮತ್ತು Password ಗಳನ್ನು ನೀಡಲಾಗುತ್ತದೆ. ಇವುಗಳನ್ನು ತಪ್ಪದೇ ಬರೆದಿಟ್ಟುಕೊಂಡಿರತಕ್ಕದ್ದು. ಇದರಿಂದ ಮುಂದಿನ ಹಂತದಲ್ಲಿ ID ಸಂಖ್ಯೆಯನ್ನು ನಮೂದಿಸುವುದರ ಮೂಲಕ Photo/Signature/Paid Challan ಅನ್ನು Upload ಮಾಡಲು ಸಾಧ್ಯವಾಗುವುದು.

(7) ಅಭ್ಯರ್ಥಿಗಳು ಭರ್ತಿ ಮಾಡಲಾದ ಎಲ್ಲಾ ವಿವರಗಳು ಪರದೆಯ ಮೇಲೆ ಮೂಡಿದ ನಂತರ ಮತ್ತೊಂದು ಸಲ ಕೂಲಂಕಷವಾಗಿ ಪರಿಶೀಲಿಸಿ, ಏನಾದರೂ ತಪ್ಪುಗಳಿದ್ದಲ್ಲಿ Edit button ಮೇಲೆ ಕ್ಲಿಕ್ ಮಾಡಿ ಅಗತ್ಯ ತಿದ್ದುಪಡಿಗಳನ್ನು ಮಾಡುವುದು.

(8) ಈ ಹಂತದಲ್ಲಿ ಶುಲ್ಕವನ್ನು ಪಾವತಿಸಬೇಕಿರುವ ಚಲನ್ ಮೂಡಿದಾಗ ಅಧಿಸೂಚನೆ/ಸೂಚನೆಗಳಲ್ಲಿ ತಿಳಿಸಿದಂತೆ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಗಳಲ್ಲಿ ಶುಲ್ಕವನ್ನು ಪಾವತಿಸಬಹುದು.

(9) ಅಭ್ಯರ್ಥಿಗಳಿಗೆ ಚಲನ್‌ನ ಮುದ್ರಣವು ಕಾಣದೇ ಇದ್ದಲ್ಲಿ "Enter Journal Number" ಹಾಗೂ Applied Job ನ Upload Photo Button ಮೇಲೆ ಕ್ಲಿಕ್ ಮಾಡುವುದು. ಆಗ Application ID ಮತ್ತು Password ಅನ್ನು enter ಮಾಡಿದಾಗ ಚಲನ್ ಲಿಂಕ್ ಪ್ರಿಂಟ್ ಅನ್ನು ನೋಡಬಹುದಾಗಿದ್ದು, Print Challan Link ಅನ್ನು ಕ್ಲಿಕ್ ಮಾಡಿದಾಗ ಅದರ ಪ್ರಿಂಟ್ ಅನ್ನು ಅಭ್ಯರ್ಥಿಗಳು ತೆಗೆದುಕೊಳ್ಳಬಹುದು.

ಟಿಪ್ಪಣಿ: ಚಲನ್ ಪ್ರತಿಯನ್ನು ಪಡೆಯುವುದಕ್ಕೆ ಮುನ್ನ ಅರ್ಜಿಯಲ್ಲಿ ನಮೂದಿಸಿರುವ ಎಲ್ಲ ವಿವರಗಳೂ ಸರಿಯಾಗಿವೆ ಎಂದು ಖಚಿತಪಡಿಸಿಕೊಳ್ಳತಕ್ಕದ್ದು. ನಿಮ್ಮ ಅರ್ಜಿಯಲ್ಲಿ ಏನಾದರೂ ಬದಲಾವಣೆ ಮಾಡಿಕೊಳ್ಳಬೇಕಾಗಿದ್ದಲ್ಲಿ ಎಡಿಟ್ ಬಟನ್ ಒತ್ತಿ ಬದಲಾವಣೆ ಮಾಡಿಕೊಳ್ಳತತಕ್ಕದ್ದು. ಏಕೆಂದರೆ, ಚಲನ್ ಪ್ರತಿಯನ್ನು ಪಡೆದ ನಂತರ ಅರ್ಜಿಯಲ್ಲಿರುವ ಯಾವುದೇ ವಿವರಗಳನ್ನು ಮಾರ್ಪಡಿಸಲು ಅವಕಾಶವಿರುವುದಿಲ್ಲ.

3.1 ಎರಡನೇ ಹಂತದಲ್ಲಿ ಈ ಕೆಳಕಂಡಂತೆ ಅಭ್ಯರ್ಥಿಗಳು ಸೂಚನೆಗಳನ್ನು ಪಾಲಿಸತಕ್ಕದ್ದು:–

ಹಂತ–2

(1) ಈ ಮೊದಲೇ ಆರಿಸಿಕೊಂಡ ಹುದ್ದೆಗಳ ಗುಂಪನ್ನು ಆಯ್ಕೆ ಮಾಡಿಕೊಳ್ಳುವುದು.

(2) ಅಭ್ಯರ್ಥಿಗಳು ಅರ್ಜಿ ಸಲ್ಲಿಸಿರುವ ಹುದ್ದೆಗಳಿಗೆ ಸಂಬಂಧಿಸಿದಂತೆ Journal Entry Number ಹಾಗೂ Photo Upload Button ಗಳನ್ನು ಕ್ಲಿಕ್ ಮಾಡತಕ್ಕದ್ದು.

(3) ಈ ಹಂತದಲ್ಲಿ ನಿಮ್ಮ Application ID ಮತ್ತು Password ಅನ್ನು entry ಮಾಡಲು ಅರ್ಜಿಯಲ್ಲಿ ಕೇಳಲಾಗುತ್ತದೆ.

(4) ಈ ಮೇಲಿನ ವಿವರಗಳನ್ನು ನಮೂದಿಸಿದ ನಂತರ ಬ್ಯಾಂಕಿನ Journal Number ಮತ್ತು ಶುಲ್ಕ ಪಾವತಿಸಿದ ದಿನಾಂಕವನ್ನು ನಮೂದಿಸತಕ್ಕದ್ದು.

(5) ನಂತರ ಫೋಟೋ ಮತ್ತು ಪೂರ್ಣ ಸಹಿ ಹಾಗೂ ಬ್ಯಾಂಕಿನಿಂದ ಪಡೆದ ಚಲನ್ ಅನ್ನು Upload ಮಾಡುವ ಪುಟವನ್ನು ನೋಡಬೇಕಿರುತ್ತದೆ.

(6) ಅಭ್ಯರ್ಥಿಗಳು ಫೋಟೋ, ಪೂರ್ಣ ಸಹಿ ಮತ್ತು ಶುಲ್ಕ ಪಾವತಿಸಿದ ಬ್ಯಾಂಕ್ ಚಲನ್ ಅನ್ನು Upload ಮಾಡಿ, ಅಂದರೆ ಅವರ ಇತ್ತೀಚಿನ ಪಾಸ್‌ಪೋರ್ಟ್ ಆಳತೆಯ ಭಾವ ಚಿತ್ರವನ್ನು ಒಂದು ಹಾಳೆಯ ಮೇಲೆ ಅಂಟಿಸಿ, ಅದರ ಕೆಳಗೆ ಕಪ್ಪು ಶಾಹಿಯ ಸ್ಕೆಚ್ ಪೆನ್ನಲ್ಲಿ ಪೂರ್ಣವಾಗಿ ಸಹಿ ಮಾಡಿ ಇದನ್ನು ಹಾಗೂ ಬ್ಯಾಂಕಿನಿಂದ ಪಡೆದ ಚಲನ್ ಅನ್ನು Scan ಮಾಡಿ ಅರ್ಜಿಗೆ Upload ಮಾಡತಕ್ಕದ್ದು. ನಂತರ ಭರ್ತಿ ಮಾಡಿರುವ ಪೂರ್ತಿ ಅರ್ಜಿಯನ್ನು ಪಡೆಯಲು Reprint Application Button ಅನ್ನು ಒತ್ತಿ ಅರ್ಜಿಯ ಪ್ರತಿ ಪಡೆಯಬಹುದು.

3.2 ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ವಿಳಂಬ ಮಾಡದೆ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಅದನ್ನು ಇತರೆ ಯಾವುದೇ ಪರೀಕ್ಷೆ ಅಥವಾ ನೇಮಕಾತಿಗಳಿಗೆ ಹೊಂದಿಸಿಕೊಳ್ಳಲಾಗುವುದಿಲ್ಲ.

* ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 21–01–2012.

* ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 21–02–2012.

* ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 22–02–2012.

* ಶುಲ್ಕ ಪಾವತಿಸಿದ ಬ್ಯಾಂಕ್ ಚಲನ್ ಮತ್ತು ಫೋಟೋ ಹಾಗೂ ಸಹಿಯನ್ನು ಸ್ಕಾನ್ ಮಾಡಿ ಅಪ್‌ಲೋಡ್ ಮಾಡಲು ಹಾಗೂ Journal Number ನಮೂದಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: 23–02–2012 ಸಂಜೆ 5.30ರವರೆಗೆ

ವಿಶೇಷ ಸೂಚನೆ: On-line ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) 8453242869, 8453247103, 8453248059 ಮತ್ತು 8453621209 ಅನ್ನು ಬೆಳಿಗ್ಗೆ 8:00 ಗಂಟೆಯಿಂದ ರಾತ್ರಿ 8.00 ಗಂಟೆಯವರೆಗೆ ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಸಲ್ಲಿಸಬಹುದು.

4. ಅರ್ಹತಾ ಷರತ್ತುಗಳು:–

ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

ಆ) ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ಸರ್ಕಾರದಿಂದ ಪೂರ್ವಾನುಮತಿಯನ್ನು ಪಡೆಯದೇ ನೇಮಕಾತಿಗೆ ಅರ್ಹರಾಗುವುದಿಲ್ಲ.

ಇ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

ಈ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

5 (1) ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ:–

ಕಾಲಕಾಲಕ್ಕೆ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006 ರಲ್ಲಿ ನಿರ್ದಿಷ್ಟಪಡಿಸಲಾದಂತೆ, ಆಯೋಗದಿಂದ ಅಧಿಸೂಚಿಸಲಾಗಿರುವ ಯಾವುದೇ ತಾಂತ್ರಿಕ/ ತಾಂತ್ರಿಕೇತರ ಹುದ್ದೆಗಳ ಸಂದರ್ಶನಕ್ಕೆ ಅರ್ಹರಾಗಲು ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ.ಯ ಕನ್ನಡ ಪ್ರಥಮ ಭಾಷೆಯ ಮಟ್ಟದ 150 ಅಂಕಗಳಿಗೆ ಪರೀಕ್ಷೆ ನಡೆಸಲಿದ್ದು, ಅದರಲ್ಲಿ ಕನಿಷ್ಠ 50 ಅಂಕಗಳೊಂದಿಗೆ ಕಡ್ಡಾಯವಾಗಿ ತೇರ್ಗಡೆ ಹೊಂದಲೇಬೇಕು. ನಿಗದಿಪಡಿಸಿದ ಕನಿಷ್ಠ 50 ಅಂಕಗಳನ್ನು ಪಡೆಯದ ಅಭ್ಯರ್ಥಿಗಳು ಸಂದರ್ಶನಕ್ಕೆ ಅರ್ಹರಾಗುವುದಿಲ್ಲ ಹಾಗೂ ಈ ಕನ್ನಡ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಯ್ಕೆಗೆ ಪರಿಗಣಿಸುವುದಿಲ್ಲ.

ಆದರೆ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯ ವಿನಾಯಿತಿ ಬಗ್ಗೆ ಕೆಳಕಂಡ ಷರತ್ತುಗಳನ್ನು ಸೇರ್ಪಡಿಸಲಾಗಿರುತ್ತದೆ.

" ಎಸ್.ಎಸ್.ಎಲ್.ಸಿ. ಅಥವಾ ಇದಕ್ಕೆ ತತ್ಸಮಾನವೆಂದು ರಾಜ್ಯ ಸರ್ಕಾರದಿಂದ ಘೋಷಿಸಲ್ಪಟ್ಟ ಇತರೆ ಯಾವುದೇ ಪರೀಕ್ಷೆಯಲ್ಲಿ ಅಥವಾ ಎಸ್.ಎಸ್.ಎಲ್.ಸಿ. ಪರೀಕ್ಷೆಗಿಂತ ಮೇಲ್ಮಟ್ಟದ ಯಾವುದೇ ಪರೀಕ್ಷೆಯಲ್ಲಿ ಕನ್ನಡವನ್ನು ಮುಖ್ಯ ಭಾಷೆಯಾಗಿ, ಅಥವಾ ದ್ವಿತೀಯ ಭಾಷೆಯಾಗಿ ಅಥವಾ ಐಚ್ಛಿಕ ವಿಷಯವಾಗಿ (ಆದರೆ ಸಂಯುಕ್ತ ಪತ್ರಿಕೆಯ ವಿಷಯಗಳಲ್ಲೊಂದಾಗಿರಬಾರದು) ಅಥವಾ ಮೇಲಿನ ಪರೀಕ್ಷೆಗಳಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿ ತೇರ್ಗಡೆಯಾಗಿರುವ ಅಥವಾ ಕರ್ನಾಟಕ ಲೋಕ ಸೇವಾ ಆಯೋಗದಿಂದ ಇದೇ ನಿಯಮಗಳಡಿಯಲ್ಲಿ ಈ ಹಿಂದೆ ನಡೆಸಲ್ಪಟ್ಟ ಕಡ್ಡಾಯ ಕನ್ನಡ ಭಾಷೆ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವ ಅಭ್ಯರ್ಥಿಗಳು, ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದರಿಂದ ವಿನಾಯಿತಿ ಹೊಂದಿರುತ್ತಾರೆ ".

ವಿಶೇಷ ಸೂಚನೆ:– ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ತೃತೀಯ ಭಾಷೆಯನ್ನಾಗಿ ಅಭ್ಯಸಿಸಿರುವ ಅಭ್ಯರ್ಥಿಗಳು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯನ್ನು ತೆಗೆದುಕೊಳ್ಳಲೇ ಬೇಕಿರುತ್ತದೆ.

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಿಂದ ವಿನಾಯಿತಿ ಪಡೆಯಲು ಅರ್ಜಿಯ ನಿಗದಿತ ಸ್ಥಳದಲ್ಲಿ ವಿವರಗಳನ್ನು ನೀಡತಕ್ಕದ್ದು. ಸರಿಯಾದ ಮಾಹಿತಿ ಒದಗಿಸದಿದ್ದಲ್ಲಿ ಮೇಲಿನ ವಿನಾಯಿತಿಗಳನ್ನು ಪಡೆಯಲು ಅರ್ಹತೆ ನೀಡುವುದಿಲ್ಲ.

ಸೂಚನೆ:–ಕನ್ನಡ ಕಡ್ಡಾಯ ಭಾಷಾ ಪರೀಕ್ಷೆ ಬಗ್ಗೆ ಪಠ್ಯಕ್ರಮವನ್ನು ಆಯೋಗದ ವೆಬ್ ಸೈಟ್ " http://kpsc. kar.nic.in/SYLLABUS " ನಲ್ಲಿ ಬಿತ್ತರಿಸಲಾಗಿದೆ.

5.2 ಭಾಗ–1–ಗ್ರೂಪ್–ಎ, ಬಿ ಮತ್ತು ಸಿ ತಾಂತ್ರಿಕ ಹುದ್ದೆಗಳ ನೇಮಕಾತಿ ವಿಧಾನ

(ಸಂದರ್ಶನದ ಮೂಲಕ ಆಯ್ಕೆ):–

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹರಾದ ನಂತರ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006ರ ಉಪನಿಯಮ 6ರನ್ವಯ ಅಭ್ಯರ್ಥಿಗಳನ್ನು ಅವರು ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡವಾರು ಮತ್ತು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಆಧಾರದ ಮೇಲೆ 1:3 ಅನುಪಾತದಲ್ಲಿ ಸಂದರ್ಶನಕ್ಕೆ ಆಹ್ವಾನಿಸಲಾಗುವುದು. ಅಭ್ಯರ್ಥಿಗಳು ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.

ಸಂದರ್ಶನ ನಡೆಸುವ ಉದ್ದೇಶ ಎಂದರೆ ಅಭ್ಯರ್ಥಿಗಳು ಆಯ್ಕೆ ಬಯಸಿದ ಹುದ್ದೆಗೆ ಅವರ ಅರ್ಹತೆ, ವ್ಯಕ್ತಿತ್ವ, ಸಂಬಂಧಿತ ವಿಷಯದಲ್ಲಿ ವ್ಯಕ್ತಪಡಿಸುವ ಸಾಮರ್ಥ್ಯತೆ, ಸೂಕ್ಷ್ಮತೆ ಮತ್ತು ಕರ್ತೃತ್ವ ಶಕ್ತಿ, ಸಾಮಾನ್ಯ ಜ್ಞಾನ ಹಾಗೂ ವಿಷಯದಲ್ಲಿನ ಪರಿಜ್ಞಾನ ಹಾಗೂ ಇನ್ನಿತರ ವಿಶೇಷ

ಗುಣಗಳನ್ನು ನಿರ್ಧರಿಸುವುದಾಗಿದ್ದು, ಅಭ್ಯರ್ಥಿಗಳು ಆಯಾ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಶೇಕಡವಾರು ಅಂಕಗಳ ಮತ್ತು ಆಯೋಗವು ನಡೆಸುವ ಸಂದರ್ಶನದಲ್ಲಿ ಗಳಿಸಿದ ಅಂಕಗಳ ಜೇಷ್ಠತೆಯ ಆಧಾರದ ಮೇಲೆ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳನ್ವಯ ಆಯ್ಕೆ ಮಾಡಲಾಗುವುದು.

ಸಂದರ್ಶನಕ್ಕೆ ನಿಗದಿಪಡಿಸಲಾದ ಗರಿಷ್ಠ ಅಂಕಗಳು 15 (ಹದಿನೈದು)

5.3 ಭಾಗ–2 – ಗ್ರೂಪ್ "ಬಿ" ಮತ್ತು "ಸಿ" ತಾಂತ್ರಿಕೇತರ ಹುದ್ದೆಗಳ ನೇಮಕಾತಿ ವಿಧಾನ:–

ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನ ಮೂಲಕ ಆಯ್ಕೆ

ಸ್ಪರ್ಧಾತ್ಮಕ ಪರೀಕ್ಷಾ ವಿಧಾನ: ಸ್ಪರ್ಧಾತ್ಮಕ ಪರೀಕ್ಷೆಯು ಕೆಳಕಂಡ ಎರಡು ಪತ್ರಿಕೆಗಳನ್ನೊಳಗೊಂಡಿದ್ದು ವಸ್ತು ನಿಷ್ಠ ಬಹು ಆಯ್ಕೆ (Objective Multiple Choice) ಮಾದರಿಯದಾಗಿರುತ್ತದೆ.

ಪತ್ರಿಕೆ – 1 (ಸಾಮಾನ್ಯ ಪತ್ರಿಕೆ) (General Paper) 200 ಅಂಕಗಳು – 1½ ಘಂಟೆ

(ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣನಾದ ಒಬ್ಬ ವ್ಯಕ್ತಿಯಿಂದ ನಿರೀಕ್ಷಿಸಬಹುದಾದ ಸಾಮಾನ್ಯಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳಾದ ಪ್ರಚಲಿತ ವಿದ್ಯಮಾನಗಳು, ಸಾಮಾನ್ಯ ವಿಜ್ಞಾನಗಳು, ಭಾರತದ ಇತಿಹಾಸ, ಭಾರತದ ಭೂಗೋಳ, ಸಮಾಜ ವಿಜ್ಞಾನ, ಪ್ರತಿ ದಿನ ಗಮನಿಸುವ ವಿಷಯಗಳು, ಪ್ರಯೋಗಿಕ ಜ್ಞಾನ ಮತ್ತು ಸಾಮಾನ್ಯ ಬೌದ್ಧಿಕ ಸಾಮರ್ಥ್ಯಗಳನ್ನು ಒಳಗೊಂಡಿರುವ ಸಾಮಾನ್ಯ ಪತ್ರಿಕೆ).

ಪತ್ರಿಕೆ – 2 (ನಿರ್ದಿಷ್ಟ ಪತ್ರಿಕೆ) (Specific Paper) – 200 ಅಂಕಗಳು – 2 ಘಂಟೆ

<u>ಸೂಚನೆ–</u> 1) ಕನ್ನಡ ಕಡ್ಡಾಯ ಭಾಷಾ ಪರೀಕ್ಷೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆ ಬಗ್ಗೆ ಪಠ್ಯಕ್ರಮವನ್ನು ಆಯೋಗದ ವೆಬ್ ಸೈಟ್ "http://kpsc.kar.nic.in/SYLLABUS " ನಲ್ಲಿ ಬಿತ್ತರಿಸಲಾಗಿದೆ.

ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಇರುತ್ತವೆ. ಕನ್ನಡ ಭಾಷೆಯಲ್ಲಿರುವ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಅಸ್ಪಷ್ಟತೆ ಇದ್ದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿರುವ ಪ್ರಶ್ನೆಗಳನ್ನು ನೋಡುವುದು.

<u>ಟಿಪ್ಪಣಿ:</u>– ಪ್ರಶ್ನೆ ಪತ್ರಿಕೆ ಬಗ್ಗೆ ಯಾವುದೇ ಬಗೆಯ ಆಕ್ಷೇಪಣೆ ಇದ್ದಲ್ಲಿ, ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲು ಪರೀಕ್ಷಾ ದಿನವೇ ಸಂಬಂಧಿತ ಮೇಲ್ವಿಚಾರಕರ ಮುಖಾಂತರ ಅಭ್ಯರ್ಥಿಯ ಹೆಸರು, ವಿಳಾಸ, ನೋಂದಣಿ ಸಂಖ್ಯೆ ಇತ್ಯಾದಿಗಳನ್ನು ನಮೂದಿಸಿರುವ ಲಿಖಿತ ಮನವಿಯನ್ನು ಆಯೋಗಕ್ಕೆ ಸಲ್ಲಿಸಿ ಸ್ವೀಕೃತಿ (Acknowledgement) ಪಡೆಯಬೇಕು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸುವ ಯಾವುದೇ ಆಕ್ಷೇಪಣೆಯನ್ನು ಮಾನ್ಯ ಮಾಡಲಾಗುವುದಿಲ್ಲ.

ಕಡ್ಡಾಯ ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹರಾದ ನಂತರ ತಿದ್ದುಪಡಿಯಾದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಮತ್ತು ಆಯ್ಕೆ) (ಸಾಮಾನ್ಯ) ನಿಯಮಗಳು 2006ರ ಉಪನಿಯಮ 6(ಬಿ)ರನ್ವಯ ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳ ಶೇಕಡವಾರು ಮತ್ತು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಆಧಾರದ ಮೇಲೆ 1:3 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಹ್ವಾನಿಸಲಾಗುವುದು. ಅಭ್ಯರ್ಥಿಗಳು ಪರೀಕ್ಷೆಗೆ/ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು.

ಸಂದರ್ಶನಕ್ಕೆ ನಿಗದಿಪಡಿಸಿದ ಗರಿಷ್ಠ ಅಂಕಗಳು:– ಸ್ಪರ್ಧಾತ್ಮಕ ಪರೀಕ್ಷೆಗೆ ನಿಗದಿಪಡಿಸಿದ ಒಟ್ಟು ಅಂಕಗಳ ಶೇಕಡ 12.5ರಷ್ಟು ಸಂದರ್ಶನಕ್ಕೆ ನಿಗದಿಪಡಿಸಿದ ಗರಿಷ್ಠ ಅಂಕಗಳಾಗಿರುತ್ತವೆ. ಆಯೋಗವು ನಿಯಮಾನುಸಾರ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಒಟ್ಟು ಅಂಕಗಳು ಮತ್ತು ಸಂದರ್ಶನದಲ್ಲಿ ಗಳಿಸಿದ ಅಂಕಗಳ ಶೇಕಡವಾರರ ಜೇಷ್ಠತೆಯನ್ನು ಆಧರಿಸಿ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ನಿಯಮಗಳನುಸಾರ ಹುದ್ದೆಗಳ ನೇಮಕಾತಿಗಾಗಿ ಇರುವ ಮೀಸಲಾತಿಯನ್ವಯ ಪ್ರಕಟಿಸಲಾದ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಅಭ್ಯರ್ಥಿಗಳನ್ನು ಅಯ್ಕೆ ಮಾಡುತ್ತದೆ.

5.4 ಭಾಗ–3:– (ವಿಶೇಷ ನೇಮಕಾತಿ ನಿಯಮಗಳು 2001ರನ್ವಯ ಭರ್ತಿ ಮಾಡಲಾಗುವ ಬ್ಯಾಕ್‌ಲಾಗ್ ಹುದ್ದೆಗಳು)

ನೇಮಕಾತಿ ವಿಧಾನ:–ಅಭ್ಯರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನಾಗಲೀ ಅಥವಾ ಸಂದರ್ಶನವನ್ನಾಗಲೀ (Personality Test) ಎದುರಿಸಬೇಕಾಗಿರುವುದಿಲ್ಲ. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ತುಂಬದೇ ಇರುವ ಸ್ಥಾನಗಳು) (ವಿಶೇಷ ನೇಮಕಾತಿ) ನಿಯಮಗಳು 2001ರನ್ವಯ, ಆಯಾ ಹುದ್ದೆಗಳಿಗೆ ನಿಗದಿಪಡಿಸಿದ್ದ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಗಳು ಗಳಿಸಿದ್ದ ಒಟ್ಟು ಅಂಕಗಳ ಶೇಕಡಾವಾರನ್ನು ಆಧರಿಸಿ 18 ವರ್ಷದಿಂದ 28 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಒಂದು ಜ್ಯೇಷ್ಠತಾ ಪಟ್ಟಿಯನ್ನು ಹಾಗೂ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಇನ್ನೊಂದು ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಇದರ ಆಧಾರದಂತೆ ಆಯ್ಕೆ ಮಾಡಲಾಗುವುದು. ಆಯ್ಕೆ ಮಾಡುವಾಗ 29 ವರ್ಷದಿಂದ 40 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳ ಜ್ಯೇಷ್ಠತಾ ಪಟ್ಟಿಯಲ್ಲಿರುವವರಿಗೆ ಮೊದಲ ಆದ್ಯತೆ ನೀಡಲಾಗುವುದು.

6. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ವಯೋಮಿತಿ:–

6(ಎ) ಶೈಕ್ಷಣಿಕ ವಿದ್ಯಾರ್ಹತೆ:– ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅನುಸೂಚಿಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೆ ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದರೂ ಸಹ ಪರಿಗಣಿಸಲಾಗುವುದಿಲ್ಲ.

6(ಬಿ) ಯಾವುದೇ ಹುದ್ದೆಗೆ ಸೇವಾನುಭವವನ್ನು ನಿಗದಿಪಡಿಸಿದಾಗ ಅಭ್ಯರ್ಥಿಗಳು ವಿದ್ಯಾರ್ಹತೆ ಹೊಂದಿದ ನಂತರ ಸೇವಾನುಭವ ಹೊಂದಿರತಕ್ಕದ್ದು.

6(ಸಿ) ಯಾವುದೇ ಹುದ್ದೆಗೆ ಆದ್ಯತಾ ವಿದ್ಯಾರ್ಹತೆಯನ್ನು ನಿಗದಿಪಡಿಸಿದಾಗ ಆದ್ಯತಾ ವಿದ್ಯಾರ್ಹತೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಪರಿಗಣಿಸಲಾಗುವುದು. ಆದರೆ ಆಯ್ಕೆಪಟ್ಟಿಯನ್ನು ಸಿದ್ಧಪಡಿಸುವಾಗ ಆದ್ಯತಾ ವಿದ್ಯಾರ್ಹತೆ ಹೊಂದಿರುವ ಮತ್ತು ಆದ್ಯತಾ ವಿದ್ಯಾರ್ಹತೆ ಹೊಂದದೇ ಇರುವ ಅಭ್ಯರ್ಥಿಗಳ ಅಂಕಗಳ ಜೇಷ್ಠತೆಯ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳ ಆಧಾರದ ಮೇಲೆ ಮಾಡಲಾಗುವುದು.

ತಾಂತ್ರಿಕ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಆಯಾ ಹುದ್ದೆಗೆ ನಿಗದಿಪಡಿಸಿರುವ ವಿದ್ಯಾರ್ಹತೆಯಲ್ಲಿ ಗಳಿಸಿರುವ ಶೇಕಡವಾರು ಅಂಕಗಳ ಆಧಾರದ ಮೇಲೆ ಸಂದರ್ಶನಕ್ಕೆ ಆಹ್ವಾನಿಸುವುದರಿಂದ ಅಭ್ಯರ್ಥಿಗಳು ಅರ್ಜಿಯಲ್ಲಿ ಎಲ್ಲಾ ಸೆಮಿಸ್ಟರ್ / ವರ್ಷಗಳಲ್ಲಿ ಗಳಿಸಿರುವ ಒಟ್ಟಾರೆ ಅಂಕಗಳನ್ನು ಕ್ರೋಢೀಕರಿಸಿ ಗರಿಷ್ಠ ಮತ್ತು ಪಡೆದಿರುವ ಅಂಕಗಳನ್ನು ಸ್ಪಷ್ಟವಾಗಿ ನಮೂದಿಸುವುದು. ಕೆಲವು ವಿಶ್ವವಿದ್ಯಾನಿಲಯಗಳು ಮೊದಲನೇ ಬಾರಿ ಗಳಿಸಿರುವ ಅಂಕಗಳನ್ನು ಮಾತ್ರ ನಮೂದಿಸಿದ್ದು, ಒಂದಕ್ಕಿಂತ ಹೆಚ್ಚು ಬಾರಿ ಬರೆದು ಉತ್ತೀರ್ಣರಾಗಿರುವ ಅಂಕಗಳನ್ನು ಗಣನೆಗೆ ತೆಗೆದುಕೊಂಡಿರುವುದಿಲ್ಲ. ಅಭ್ಯರ್ಥಿಗಳು ಆ ಅಂಕಗಳನ್ನು ಸೇರಿಸಿಕೊಂಡು ಜೊತೆಗೆ ಗ್ರೇಸ್ ಮಾರ್ಕ್ಸ್‌ನ್ನು ನೀಡಿದ್ದಲ್ಲಿ ಅದನ್ನು ಒಟ್ಟು ಅಂಕಗಳೊಂದಿಗೆ ಸೇರಿಸಿಕೊಂಡು ಅಂಕಗಳನ್ನು ನಮೂದಿಸುವುದು ಹಾಗೂ ಗ್ರೇಡ್ ಅಂಕಗಳನ್ನು ಪಡೆದ ಅಭ್ಯರ್ಥಿಗಳು ಅವರ ಗ್ರೇಡ್ ಅಂಕಗಳನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿ ವಿಶ್ವವಿದ್ಯಾಲಯ ನೀಡಿರುವ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಶೇಕಡವಾರು ಅಂಕಗಳನ್ನು ತಪ್ಪದೇ ನಮೂದಿಸಬೇಕು. ಅಂಕಗಳು ವ್ಯತ್ಯಾಸ ಕಂಡುಬಂದಲ್ಲಿ ಅಭ್ಯರ್ಥಿಯೇ ಜವಾಬ್ದಾರರಾಗಿರುತ್ತಾರೆ. ತಪ್ಪಿದ್ದಲ್ಲಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

6.1 ಬ್ಯಾಕ್ ಲಾಗ್ ಹುದ್ದೆಗಳು : ಶೈಕ್ಷಣಿಕ ವಿದ್ಯಾರ್ಹತೆ:– ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅನುಸೂಚಿಯಲ್ಲಿ ಆಯಾ ಹುದ್ದೆಯ ಮುಂದೆ ಸೂಚಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು ಅಭ್ಯರ್ಥಿಗಳು ಹೊಂದಿರಲೇಬೇಕು. ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದದೇ, ಹೆಚ್ಚಿನ ವಿದ್ಯಾರ್ಹತೆಯನ್ನು ಹೊಂದಿದ್ದರೂ ಸಹ ಪರಿಗಣಿಸಲಾಗುವುದಿಲ್ಲ. **ಸದರಿ ಹುದ್ದೆಗಳ ನೇಮಕಾತಿಯನ್ನು ನಿಯಮಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯಲ್ಲಿ ಗಳಿಸಿರುವ ಒಟ್ಟು ಶೇಕಡಾವಾರು ಅಂಕಗಳ ಜ್ಯೇಷ್ಠತೆಯನುಸಾರ ಮಾಡಲಾಗುವುದರಿಂದ ಅಭ್ಯರ್ಥಿಗಳು ಅಂಕಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು. ತಪ್ಪಿದ್ದಲ್ಲಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.**

6.2 ವಯೋಮಿತಿ:– ಅನುಸೂಚಿಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿದಂತೆ, ಅರ್ಜಿಗಳನ್ನು ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ ವಯೋಮಿತಿಯನ್ನು ಹೊಂದಿರಬೇಕು ಹಾಗೂ ನಿಗದಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

(ಅ) ಅಭ್ಯರ್ಥಿಯು ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಅಥವಾ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಯಾದ ಅಥವಾ ರಾಜ್ಯ ಅಧಿನಿಯಮದ ಅಥವಾ ಕೇಂದ್ರ ಅಧಿನಿಯಮದ ಮೂಲಕ ಸ್ಥಾಪನೆಗೊಂಡು ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮ್ಯ ಅಥವಾ ನಿಯಂತ್ರಣದಲ್ಲಿರುವ ನಿಗಮದಲ್ಲಿ ಹುದ್ದೆ ಹೊಂದಿರುವ ಅಥವಾ ಹಿಂದೆ ಹೊಂದಿದ್ದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 10 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಆ) ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಕೇಂದ್ರ ಸಶಸ್ತ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು. (ಈ ಉಪ ಕಂಡಿಕೆಗೆ ಸಂಬಂಧಿಸಿದ ವಿವರಣೆಗಳಿಗೆ ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮಗಳು 2 ಮತ್ತು 9 ರನ್ವಯ ಅರ್ಥೈಸಿಕೊಳ್ಳುವುದು)

(ಇ) ಅಭ್ಯರ್ಥಿಗಳು ನ್ಯಾಷನಲ್ ಕ್ಯಾಡೆಟ್ ಕೋರ್‌ನಲ್ಲಿ ಪೂರ್ಣಕಾಲಿಕ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿ ಬಿಡುಗಡೆಯಾಗಿರುವ ವ್ಯಕ್ತಿಯಾಗಿದ್ದರೆ ಅಂಥ ಕ್ಯಾಡೆಟ್ ಪರಿವೀಕ್ಷನಾಗಿ ಅವನು ಸೇವೆ ಸಲ್ಲಿಸಿದಷ್ಟು ವರ್ಷಗಳು.

(ಈ) ಅಭ್ಯರ್ಥಿಯು ರಾಜ್ಯ ಸರ್ಕಾರದಿಂದ ಪುರಸ್ಕೃತವಾದ ಗ್ರಾಮೀಣ ಔದ್ಯಮೀಕರಣ ಯೋಜನೆಯ ಮೇರೆಗೆ ನೇಮಕಗೊಂಡ ಗ್ರಾಮ ಸಮೂಹ ಪರಿಶೀಲಕನಾಗಿ ಈಗ ಕೆಲಸ ಮಾಡುತ್ತಿದ್ದರೆ ಅಥವಾ ಹಿಂದೆ ಇದ್ದ ಪಕ್ಷದಲ್ಲಿ ಅವನು / ಅವಳು ಅಂತಹ ಗ್ರಾಮ ಪರಿಶೀಲಕನಾಗಿ ಸೇವೆ ಸಲ್ಲಿಸಿದಷ್ಟು ವರ್ಷಗಳು.

(ಉ) ಅಭ್ಯರ್ಥಿಯು ಅಂಗವಿಕಲನಾಗಿದ್ದರೆ 10 ವರ್ಷಗಳು

(ಊ) ಅಭ್ಯರ್ಥಿಯು ಕರ್ನಾಟಕ ರಾಜ್ಯದಲ್ಲಿರುವ ಭಾರತ ಸರ್ಕಾರದ ಜನಗಣತಿ ಸಂಸ್ಥೆಯಲ್ಲಿ ಈಗ ಹುದ್ದೆಯನ್ನು ಹೊಂದಿದ್ದರೆ ಅಥವಾ ಹಿಂದೆ ಹೊಂದಿದ್ದ ಪಕ್ಷದಲ್ಲಿ ಗರಿಷ್ಠ ವಯೋಮಿತಿಯನ್ನು ಅವನು/ಅವಳು ಎಷ್ಟು ವರ್ಷಗಳ ಅವಧಿಗೆ ಆ ಹುದ್ದೆಯಲ್ಲಿ ಸೇವೆಸಲ್ಲಿಸುತ್ತಿರುವರೋ ಅಥವಾ ಹಿಂದೆ ಸಲ್ಲಿಸಿದ್ದರೋ ಅಷ್ಟು ವರ್ಷಗಳು ಅಥವಾ 5 ವರ್ಷಗಳ ಅವಧಿ ಅದರಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳು.

(ಖ) ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು.

(ಖು) ಅಭ್ಯರ್ಥಿಯು ಜೀತ ಕಾರ್ಮಿಕನಾಗಿದ್ದ ಪಕ್ಷದಲ್ಲಿ 10 ವರ್ಷಗಳು.

ಉಪ ಕಂಡಿಕೆ 6.2.(ಖು) ರ ಮೇರೆಗೆ ವಯೋಮಿತಿಯ ಸಡಿಲಿಕೆಯನ್ನು ಕೋರುವ ಅಭ್ಯರ್ಥಿಯು ಜೀತ ಕಾರ್ಮಿಕ ನಾಗಿದ್ದು, ಸದರಿ ಅಧಿನಿಯಮ ಅಥವಾ 1957ರ ಕರ್ನಾಟಕ ಜೀತ ಕಾರ್ಮಿಕ ಪದ್ಧತಿ (ರದ್ದಿಯಾತಿ) ಆದೇಶದ ಮೇರೆಗೆ ಜೀತ ಸಾಲವನ್ನು ಸಂದಾಯ ಮಾಡುವ ಹೊಣೆಯಿಂದ ಬಿಡುಗಡೆಯಾಗಿದ್ದಾನೆಂದು ಪ್ರಮಾಣ ಪತ್ರವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್‌ರಿಂದ ಪಡೆದು ಹಾಜರು ಪಡಿಸಬೇಕು.

6.3 ಬ್ಯಾಕ್ ಲಾಗ್ ಹುದ್ದೆಗಳಿಗೆ ವಯೋಮಿತಿ:– ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ 18 ವರ್ಷ ಹೊಂದಿರಬೇಕು. ಹಾಗೂ ಗರಿಷ್ಠ 40 ವರ್ಷ ವಯೋಮಿತಿಯನ್ನು ಮೀರಿರಬಾರದು. ನಿಯಮಗಳಲ್ಲಿ ವಯೋಮಿತಿ ಸಡಿಲಿಕೆಗೆ ಅವಕಾಶವಿರುವುದಿಲ್ಲ.

7. ಜಾತಿ / ಮೀಸಲಾತಿ ಪ್ರಮಾಣ ಪತ್ರಗಳು :–

ಮೀಸಲಾತಿ ಕೋರ ಬಯಸುವ ಅಭ್ಯರ್ಥಿಗಳು ಈ ಕೆಳಗೆ ನಮೂದಿಸಿರುವ ನಮೂನೆಗಳಲ್ಲಿಯೇ ಮೀಸಲಾತಿ ಪ್ರಮಾಣ ಪತ್ರಗಳನ್ನು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು:–

ಅ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು:– ನಮೂನೆ ' ಡಿ '

ಆ) ಪ್ರವರ್ಗ–1 ಕ್ಕೆ ಸೇರಿದ ಅಭ್ಯರ್ಥಿಗಳು:– ನಮೂನೆ ' ಇ '

ಇ) ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು:– ನಮೂನೆ ' ಎಫ್ '

ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರವನ್ನು ಸಂಬಂಧಿತ ತಹಸೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಅಂದರೆ ಹಿಂದುಳಿದ ವರ್ಗಗಳ ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿ ವರ್ಗದ ಮೀಸಲಾತಿ ಪ್ರಮಾಣ ಪತ್ರಗಳು 5 ವರ್ಷ ಚಾಲ್ತಿಯಲ್ಲಿರುತ್ತವೆ. ನೀವು ಪಡೆದಿರುವ ಪ್ರಮಾಣ ಪತ್ರದ ಚಾಲ್ತಿ 5 ವರ್ಷದ ಅವಧಿಯು ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಕೊನೆಯ ದಿನಾಂಕದೊಳಗಿರಬೇಕು. ಅರ್ಜಿಯ ನಿಗದಿತ ಸ್ಥಳದಲ್ಲಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ನಮೂದಿಸತಕ್ಕದ್ದು, ಹಾಗೂ ಅದೇ ಪ್ರಮಾಣ ಪತ್ರವನ್ನು ಸಂದರ್ಶನ ಸಮಯದಲ್ಲಿ ಹಾಜರುಪಡಿಸತಕ್ಕದ್ದು. ಸಂದರ್ಶನಕ್ಕೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ ಈ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ಸಾಮಾನ್ಯ ಅರ್ಹತೆಯಡಿಯಲ್ಲಿ ಅರ್ಹರಾದಲ್ಲಿ ಮಾತ್ರ ಪರಿಗಣಿಸಲಾಗುವುದು. ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ. ಈ ನಮೂನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಗಳಲ್ಲಿ ಪಡೆಯಲಾದ ಮೀಸಲಾತಿ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು.

8. <u>ಗ್ರಾಮೀಣ ಅಭ್ಯರ್ಥಿ</u>:–

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 08 ಸೆನೆನಿ 2001 ದಿನಾಂಕ 13–02–2001 ರನ್ವಯ ಗ್ರಾಮೀಣ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ–2ನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ–1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಶೀಲ್ದಾರ್‌ರವರಿಂದ ಪಡೆದಿಟ್ಟುಕೊಂಡಿರತಕ್ಕದ್ದು. ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ–2ರಲ್ಲಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಸಂದರ್ಶನಕ್ಕೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅಂತಹವರು ಗ್ರಾಮೀಣ ಮೀಸಲಾತಿಗೆ ಸಹ ಅನರ್ಹರಾಗುತ್ತಾರೆ. (ಈ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ).

9. <u>ಕನ್ನಡ ಮಾಧ್ಯಮ ಅಭ್ಯರ್ಥಿ</u>

ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಆಸುಇ 71 ಸೆನೆನಿ 2001 ದಿನಾಂಕ 24–10–2002 ರನ್ವಯ ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಹಾಗೂ ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ

ಸಂದರ್ಶನಕ್ಕೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರದ ನಮೂನೆಯನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ).

10. ಅಂಗವಿಕಲ ಅಭ್ಯರ್ಥಿ

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 50 ಎಸ್‌ಆರ್‌ಆರ್ 2000 ದಿನಾಂಕ 03–09–2005 ರಲ್ಲಿ ರಾಜ್ಯ ಸಿವಿಲ್ ಸೇವೆಗಳ ಸಮೂಹ –' ಎ ' ಮತ್ತು ' ಬಿ ' ಗುಂಪಿನ ಹುದ್ದೆಗಳಿಗೆ ಶೇಕಡ 3 ರಷ್ಟು (ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 21 ಎಸ್‌ಆರ್‌ಆರ್ 2008 ದಿನಾಂಕ 03–08–2009ರ ಅನುಸೂಚಿಯಡಿ ಸೇರ್ಪಡೆ ಮಾಡಲಾಗಿರುವ ಇಲಾಖೆಗಳು) ಮತ್ತು ಸಮೂಹ 'ಸಿ' ಗುಂಪಿನ ಹುದ್ದೆಗಳಿಗೆ ಶೇಕಡ 5 ರಷ್ಟು (ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 52 ಎಸ್‌ಆರ್‌ಆರ್ 99 ದಿನಾಂಕ 29–11–2002ರ ಅನುಸೂಚಿಯಡಿ ಸೇರ್ಪಡಿಸಲಾಗಿರುವ ಇಲಾಖೆಗಳು) ಹುದ್ದೆಗಳನ್ನು ಅಂಗವಿಕಲರಿಗೆ ಮೀಸಲಾತಿ ಕಲ್ಪಿಸಿದ್ದು, ಇದರನ್ವಯ ಶೇಕಡ 40 ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಸಿಆಸುಇ 115 ಸೆನೆನಿ 2005 ದಿನಾಂಕ 19–11–2005ರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಅಂಗವಿಕಲತೆ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಮಮಇ 65 ಪಿಹೆಚ್‌ಪಿ

2010 ದಿನಾಂಕ 18–02–2011ರಂತೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿಯ ವೈದ್ಯಕೀಯ ಪ್ರಾಧಿಕಾರ/ತಾಲ್ಲೂಕು ಮಟ್ಟದ ವೈದ್ಯಕೀಯ ಪ್ರಾಧಿಕಾರ/ಜಿಲ್ಲಾ ಮಟ್ಟದ ವೈದ್ಯಕೀಯ ಪ್ರಾಧಿಕಾರ/ ಬೆಂಗಳೂರು ವೈದ್ಯಕೀಯ ಪ್ರಾಧಿಕಾರ ಇವರಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಸಂದರ್ಶನಕ್ಕೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು / ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ. ಈ ಪ್ರಮಾಣ ಪತ್ರದ ನಮೂನೆಯನ್ನು ಸೂಚನೆಗಳಲ್ಲಿ ಅನುಬಂಧಿಸಲಾಗಿದೆ. ಮೀಸಲಾತಿ ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು.

11. ಯೋಜನೆಗಳಿಂದ ನಿರಾಶ್ರಿತ ಅಭ್ಯರ್ಥಿ (PDP)

ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 23 ಸೆನೆನಿ 99 ದಿನಾಂಕ 23–11–2000 ರನ್ವಯ ಯೋಜನೆಗಳಿಂದ ನಿರ್ವಸಿತರಾದ (ಆದರೆ ಈ ನಿಯಮಗಳು ಜಾರಿಯಾಗುವ 20 ವರ್ಷಕ್ಕೆ ಮುನ್ನ ನಿರ್ವಸಿತರಾದ ಕುಟುಂಬ ಅಭ್ಯರ್ಥಿಗಳಿಗೆ ಈ ಮೀಸಲಾತಿ ಅನ್ವಯವಾಗುವುದಿಲ್ಲ) ಕುಟುಂಬದ ಅಭ್ಯರ್ಥಿಗಳಿಗೆ ಮೀಸಲಿರಿಸಿದ ಹುದ್ದೆಗಳನ್ನು (**ಗ್ರೂಪ್ 'ಸಿ' ಹುದ್ದೆಗಳಿಗೆ ಮಾತ್ರ**) ಕ್ಲೇಮು ಮಾಡುವ ಅಭ್ಯರ್ಥಿಗಳು ಸಂಬಂಧಿತ ತಹಶೀಲ್ದಾರ್‌ರವರಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು. ಸಂದರ್ಶನಕ್ಕೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ ಮೂಲ ದಾಖಲಾತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು, ಪ್ರಮಾಣ ಪತ್ರ ಜಾರಿ ಮಾಡಿದ ದಿನಾಂಕವನ್ನು ತಪ್ಪದೇ ಅರ್ಜಿಯ ಸಂಬಂಧಪಟ್ಟ ಅಂಕಣದಲ್ಲಿ ನಮೂದಿಸತಕ್ಕದ್ದು ಹಾಗೂ ಸಂದರ್ಶನಕ್ಕೆ ಅರ್ಹರಾದಾಗ ಸಂದರ್ಶನ ಸಮಯದಲ್ಲಿ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಲಾಗುವುದು. (ಈ ಪ್ರಮಾಣ ಪತ್ರದ ನಮೂನೆಯನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ).

12 (ಎ) ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಹಾಗೂ ತಾಂತ್ರಿಕೇತರ ಹುದ್ದೆಗಳಿಗೆ ಸಂಬಂಧಿಸಿದ ಸ್ಪರ್ಧಾತ್ಮಕ ಪರೀಕ್ಷೆಯನ್ನು ಬೆಂಗಳೂರು / ಮೈಸೂರು / ಧಾರವಾಡ / ಗುಲ್ಬರ್ಗಾ / ಶಿವಮೊಗ್ಗ ಕೇಂದ್ರಗಳಲ್ಲಿ ಹಾಗೂ ಆಯೋಗವು ನಿಗದಿಪಡಿಸಿರುವ ಇತರೆ ಯಾವುದೇ ಕೇಂದ್ರ ಸ್ಥಳದಲ್ಲಿ ನಡೆಸಲಾಗುವುದು.

ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ಅವರು ಈ ಮೇಲಿನ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಇಚ್ಛಿಸುವ ಕೇಂದ್ರವನ್ನು ನಮೂದಿಸತಕ್ಕದ್ದು. ಪರೀಕ್ಷಾ ಕೇಂದ್ರವನ್ನು ನಿಗದಿಪಡಿಸುವುದು ಆಯೋಗದ ಅಂತಿಮ ತೀರ್ಮಾನವಾಗಿರುತ್ತದೆ. ಈ ಪರೀಕ್ಷೆಗಳಿಗೆ

ದಿನಾಂಕವನ್ನು ನಿಗದಿಪಡಿಸಿದಾಗ ಪ್ರವೇಶ ಪತ್ರಗಳನ್ನು ಅಭ್ಯರ್ಥಿಗಳಿಗೆ ಅಂಚೆ ಮೂಲಕ ರವಾನಿಸಲಾಗುವುದು ಇಲ್ಲವೆ ವೆಬ್ ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಲು ತಿಳಿಸಲಾಗುವುದು ಹಾಗೂ ಈ ಬಗ್ಗೆ ಮಾಹಿತಿಯನ್ನು ಆಯೋಗದ ವೆಬ್ ಸೈಟ್‌ನಲ್ಲಿ ಬಿತ್ತರಿಸಲಾಗುವುದು.

(ಬಿ) ಆಯಾ ಹುದ್ದೆಗಳಿಗೆ ಸಂದರ್ಶನ ದಿನಾಂಕ ನಿಗದಿಪಡಿಸಿ ಆಯೋಗದ ಜಾಲ ತಾಣ (Web Site)ದಲ್ಲಿ ಬಿತ್ತರಿಸಲಾಗುವುದು ಹಾಗೂ ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ಪತ್ರಗಳನ್ನು Speed Post ಮುಖಾಂತರ ಕಳುಹಿಸಲಾಗುವುದು. ಅರ್ಹ ಅಭ್ಯರ್ಥಿಗಳಿಗೆ ಸಂದರ್ಶನ ಪತ್ರ ಸ್ವೀಕೃತವಾಗದಿದ್ದಲ್ಲಿ ಆಯೋಗವನ್ನು ಸಂಪರ್ಕಿಸ ಬಹುದು. ಬ್ಯಾಕ್‌ಲಾಗ್ ಹುದ್ದೆಗಳಿಗೆ 1:2 ಅನುಪಾತದಲ್ಲಿ ಮೂಲ ದಾಖಲಾತಿಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳಿಗೆ ಸೂಚನೆ ಪತ್ರಗಳನ್ನು ಸ್ಪೀಡ್ ಪೋಸ್ಟ್ ಮುಖಾಂತರ ರವಾನಿಸಲಾಗುವುದು.

13. ಆಯೋಗದೊಡನೆ ಪತ್ರ ವ್ಯವಹಾರ:

ಆಯೋಗವು ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸುವುದಿಲ್ಲ. ಸಂದರ್ಶನಕ್ಕೆ ಅನುಮತಿಸಲಾದ ಅಭ್ಯರ್ಥಿಯಾಗಿದ್ದರೆ ಸಂದರ್ಶನ ಪತ್ರದ ನಕಲನ್ನು ನೀಡಲಾಗುವುದು.

ವಿಳಾಸ ಬದಲಾವಣೆ ಇದ್ದಲ್ಲಿ ಅಭ್ಯರ್ಥಿಗಳು ಲಿಖಿತ ಮೂಲಕ ಆಯೋಗದ ಗಮನಕ್ಕೆ ತರತಕ್ಕದ್ದು. ಈ ವಿಳಾಸ ಬದಲಾವಣೆಯನ್ನು ಪರಿಗಣಿಸಲು ಆಯೋಗವು ಪ್ರಯತ್ನಿಸುವುದು. ಆದಾಗ್ಯೂ ಈ ವಿಚಾರದಲ್ಲಿ ಆಯೋಗವು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಈ ಬಗ್ಗೆ ಅಭ್ಯರ್ಥಿಗಳು ಎಚ್ಚರ ವಹಿಸತಕ್ಕದ್ದು. ಅಭ್ಯರ್ಥಿಗಳು ಆಯೋಗದೊಡನೆ ಸಂಪರ್ಕಿಸಲೇಬೇಕಾದ ಸಂದರ್ಭದಲ್ಲಿ ತಮ್ಮ ಮನವಿಯಲ್ಲಿ ಕೆಳಕಂಡ ಮಾಹಿತಿಗಳು ಒಳಗೊಂಡಿರಬೇಕು:–

(i) ಹುದ್ದೆಯ / ವಿಷಯದ ಹೆಸರು

(ii) ಅಭ್ಯರ್ಥಿಯ ಪೂರ್ಣ ಹೆಸರು (ಬಿಡಿ ಅಕ್ಷರಗಳಲ್ಲಿ)

(iii) ಅರ್ಜಿಯಲ್ಲಿ ನಮೂದಿಸಿರುವ ಅಂಚೆ ವಿಳಾಸ

14. <u>ಪ್ರಾಮುಖ್ಯವಾದ ಸೂಚನೆಗಳು:–</u>

ಅಭ್ಯರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಒಂದು ಹಾಳೆಯ ಮೇಲಿಟ್ಟು ಅದರ ಕೆಳಗೆ ಕಪ್ಪು ಶಾಹಿಯ ಸ್ಕೆಚ್/ಮಾರ್ಕರ್ ಪೆನ್‌ಲ್ಲಿ ಸಹಿಯನ್ನು ಹಾಗೂ ಬ್ಯಾಂಕಿಗೆ ಹಣ ಪಾವತಿಸಿ ಪಡೆದ ಚಲನ್ ಅನ್ನು ಸ್ಕ್ಯಾನ್ ಮಾಡಿ ಅರ್ಜಿಗೆ UPLOAD ಮಾಡಬೇಕು. ಈ ಕೆಳಕಂಡ ಪ್ರಮಾಣ ಪತ್ರಗಳನ್ನು ನಿಗದಿತ ನಮೂನೆಯಲ್ಲಿ ON LINE ಮೂಲಕ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಪಡೆದಿಟ್ಟುಕೊಂಡಿರತಕ್ಕದ್ದು ಜಜಹಾಗೂ ಅದೇ ಮೀಸಲಾತಿ ಪ್ರಮಾಣ ಪತ್ರದ / ಇತರೇ ಪ್ರಮಾಣ ಪತ್ರಗಳ ಮೂಲ ಪ್ರತಿಯನ್ನು ಸಂದರ್ಶನಕ್ಕೆ / ಮೂಲ ದಾಖಲಾತಿಯ ಪರಿಶೀಲನೆಗೆ ಅರ್ಹರಾದಾಗ ಆ ಸಮಯದಲ್ಲಿ ಪರಿಶೀಲನೆಗೆ ಹಾಜರುಪಡಿಸಬೇಕು. ಇತರೆ ನಮೂನೆಗಳಲ್ಲಿ ಅಥವಾ ಅರ್ಜಿ ಭರ್ತಿ ಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಪಡೆದ ಯಾವುದೇ ಪ್ರಮಾಣ ಪತ್ರಗಳನ್ನು ಪರಿಗಣಿಸಲಾಗುವುದಿಲ್ಲ. ತಪ್ಪಿದ್ದಲ್ಲಿ ಇವರ ಮೀಸಲಾತಿಯನ್ನು /ಅಭ್ಯರ್ಥಿತ್ವವನ್ನು ಅನರ್ಹಗೊಳಿಸಲಾಗುವುದು.

1. ಹುದ್ದೆಗೆ ನಿಗದಿಪಡಿಸಿದ ಶುಲ್ಕವನ್ನು ಬ್ಯಾಂಕಿನಲ್ಲಿ ಪಾವತಿಸಿದ ಚಲನ್ ಪ್ರತಿ
2. ಹುದ್ದೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಎಲ್ಲಾ ವರ್ಷಗಳ /ಸೆಮಿಸ್ಟರ್‌ಗಳ ಅಂಕಪಟ್ಟಿಗಳು ಹಾಗೂ ಘಟಿಕೋತ್ಸವದ ಪ್ರಮಾಣ ಪತ್ರಗಳು / ಗ್ರೇಡ್‌ನ್ನು ಶೇಕಡವಾರು ಅಂಕಗಳಿಗೆ ಪರಿವರ್ತಿಸಿದ ಪ್ರಮಾಣ ಪತ್ರ
3. ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ /ವರ್ಗಾವಣೆ ಪ್ರಮಾಣ ಪತ್ರ / ಜನನ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ.
4. ನಿರಾಕ್ಷೇಪಣಾ ಪತ್ರ. (ಸರ್ಕಾರಿ ಸೇವೆಯಲ್ಲಿರುವ ಅಭ್ಯರ್ಥಿಗಳಿಗೆ)
5. ಸೈನಿಕ ಸೇವೆಯಿಂದ ಬಿಡುಗಡೆಯಾದ ಪ್ರಮಾಣ ಪತ್ರ / ಮಾಜಿ ಸೈನಿಕ ಅವಲಂಬಿತರಾಗಿದ್ದಲ್ಲಿ, ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿದ್ದಲ್ಲಿ ಅಥವಾ ಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ)
6. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿಗಳ ಮೀಸಲಾತಿ ಪ್ರಮಾಣ ಪತ್ರಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಮೂನೆಗಳಲ್ಲಿ (ಮೀಸಲಾತಿ ಕೋರಿದ್ದಲ್ಲಿ)
7. ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)
8. ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
9. ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
10. ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿಯ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)
11. ಸೇವಾನುಭವ ಪ್ರಮಾಣ ಪತ್ರಗಳು (ನಿಗದಿಪಡಿಸಿದಲ್ಲಿ)

(ಮೇಲಿನ ಕ್ರಮ ಸಂಖ್ಯೆ 6, 7, 8, 9, 10 ರ ಮೀಸಲಾತಿ ಪ್ರಮಾಣ ಪತ್ರಗಳ ನಮೂನೆಗಳನ್ನು ಅಭ್ಯರ್ಥಿಗಳ ಸೂಚನೆಗಳಲ್ಲಿ ತೋರಿಸಲಾಗಿದೆ. ನಿಗದಿಪಡಿಸಿದ ನಮೂನೆಗಳಲ್ಲಿ ಮೀಸಲಾತಿಯನ್ನು ಕೋರದೇ ಇತರೆ ನಮೂನೆಗಳಲ್ಲಿ ಕೋರಿದ್ದಲ್ಲಿ ಮೀಸಲಾತಿಯನ್ನು ತಿರಸ್ಕರಿಸಲಾಗುವುದು)

15. ವಿಶೇಷ ಸೂಚನೆಗಳು:–

(1) **ON LINE** ಮೂಲಕ ಅರ್ಜಿ ಸಲ್ಲಿಸುವಾಗ ಎಲ್ಲಾ ಮಾಹಿತಿಗಳನ್ನು ಸರಿಯಾಗಿ ಭರ್ತಿ ಮಾಡಿರುವ ಬಗ್ಗೆ ಖಚಿತಪಡಿಸಿಕೊಂಡು ನಂತರ ಅದರ ಒಂದು ಪ್ರತಿಯನ್ನು ಡೌನ್‌ಲೋಡ್ ಮಾಡಿಕೊಂಡು ನೇಮಕಾತಿ ಪ್ರಕ್ರಿಯೆ ಮುಗಿಯುವವರೆಗೂ ಭದ್ರವಾಗಿ ತೆಗೆದಿಟ್ಟುಕೊಂಡಿರತಕ್ಕದ್ದು.

(2) ಈಗಾಗಲೇ ಸೇವೆಯಲ್ಲಿರುವ / ಸೇವೆ ಸಲ್ಲಿಸಿದ ಅಭ್ಯರ್ಥಿಗಳು ಅವರುಗಳ ನೇಮಕಾತಿ ಪ್ರಾಧಿಕಾರಿಗಳಿಂದ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಅನುಮತಿಯನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ವಿವರಗಳನ್ನು ಅರ್ಜಿಯಲ್ಲಿ ನಮೂದಿಸತಕ್ಕದ್ದು ಮತ್ತು ಇದೇ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಸಂದರ್ಶನದ / ಮೂಲ ದಾಖಲಾತಿಯ ಪರಿಶೀಲನೆಯ ಸಮಯದಲ್ಲಿ ಹಾಜರು ಪಡಿಸತಕ್ಕದ್ದು ತಪ್ಪಿದ್ದಲ್ಲಿ ಅನರ್ಹಗೊಳಿಸಲಾಗುವುದು.

(3) ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕವಾಗುವುದು.

16. <u>ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆಗಳು:</u>

ಕೇಂದ್ರ ಕಛೇರಿಯ ಮಾಹಿತಿ ಕೇಂದ್ರ	:	080–30574957 080–30574901
		080–22343137 080–22343138
		080–22343139 080–30574938
		080–30574946 080–30574940
ಪ್ರಾಂತೀಯ ಕಛೇರಿ ಮೈಸೂರು	:	0821–2545956
ಪ್ರಾಂತೀಯ ಕಛೇರಿ ಬೆಳಗಾವಿ	:	0831–2475345
ಪ್ರಾಂತೀಯ ಕಛೇರಿ ಗುಲ್ಬರ್ಗಾ	:	08472–227944
ಪ್ರಾಂತೀಯ ಕಛೇರಿ ಶಿವಮೊಗ್ಗ	:	08182–228099
ಸಹಾಯವಾಣಿ (**Help Line**)	:	**8453242869, 8453247103, 8453248059**
		ಮತ್ತು 8453621209
ನೋಡಲ್ ಅಧಿಕಾರಿಗಳ ದೂರವಾಣಿ ಸಂಖ್ಯೆ	:	**080–30574932 080–30574959**

17. ದುರ್ನಡತೆ:– ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಪರೀಕ್ಷೆಯಲ್ಲಿ / ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸಿರುವನೆಂದು ಅಥವಾ ಅವರ ನೇಮಕಾತಿಯ ಸಂಬಂಧದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು, ಕಂಡುಬಂದಲ್ಲಿ ಅವನು / ಅವಳು ಸ್ವತ: ಕ್ರಿಮಿನಲ್ ವ್ಯವಹರಣೆಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡುವುದಲ್ಲದೆ; ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

ಡಾ: ಡಿ.ಎಸ್.ವಿಶ್ವನಾಥ್
ಕಾರ್ಯದರ್ಶಿ,
ಕರ್ನಾಟಕ ಲೋಕ ಸೇವಾ ಆಯೋಗ

ಅನುಸೂಚಿ

ಅಧಿಸೂಚನೆ ಸಂಖ್ಯೆ: ಆರ್(2)907/2011–12/ಪಿಎಸ್‌ಸಿ ದಿನಾಂಕ: 18–01–2012

ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕ: 21–02–2012 ಸಂಜೆ 5–30 ಗಂಟೆ

ಭಾಗ–1: ಗ್ರೂಪ್ –' ಎ', 'ಬಿ' ಮತ್ತು 'ಸಿ' ತಾಂತ್ರಿಕ ಹುದ್ದೆಗಳು

ಹುದ್ದೆಗಳ ಅನುಕ್ರಮ ಸಂಖ್ಯೆ	ಹುದ್ದೆಯ ಸಂಕೇತ/ POST CODE	ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ	ವೇತನ ಶ್ರೇಣಿ	ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ	ವಯೋಮಿತಿ (ವಯಸ್ಸು ವರ್ಷಗಳಲ್ಲಿ)	ಹುದ್ದೆಗಳ ವರ್ಗೀಕರಣ
1	2	3	4	5	6	7
			ಗ್ರೂಪ್–'ಎ' ಹುದ್ದೆಗಳು			
1605–1624	39	ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿನ ಗ್ರೂಪ್–ಎ ಕಿರಿಯ ಶ್ರೇಣಿಯ ಜಿಲ್ಲಾ ಶಿಕ್ಷಣಾಧಿಕಾರಿ 20 ಹುದ್ದೆಗಳು District Educational Officer- 20 posts	₹: 14050–25050	i) Master's or Honour's Degree or I Class Bachelor's Degree of a recognized University. ii) B.T. or B.Ed., or an equivalent Degree of a recognized University and iii) 10 years experience of teaching in or inspection of educational institutions.	ಕನಿಷ್ಠ – 18 ಗರಿಷ್ಠ – 45 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ – 48 ಪ.ಜಾ, ಪ.ಪಂ, ಪ್ರ 1 – 50	

ಮೀಸಲಾತಿ	ಇ	ಮ	ಗ್ರಾ	ಮಾಸೈ	ಒಟ್ಟು
ಪ.ಜಾ	01	01	01	–	03
ಪ.ಪಂ.	01	–	–	–	01
ಪ್ರ.1	01	–	–	–	01
ಪ್ರ.2(ಎ)	01	01	–	–	02
ಪ್ರ.2(ಬಿ)	01	–	–	–	01
ಪ್ರ.3(ಎ)	01	–	–	–	01
ಪ್ರ.3(ಬಿ)	01	–	–	–	01
ಸಾ.ಅ	03	03	03	01	10
ಒಟ್ಟು	10	05	04	01	20

ಗ್ರೂಪ್–'ಬಿ' ಹುದ್ದೆಗಳು

1625–1659	01	ಮುಖ್ಯ ವಿದ್ಯುತ್ ಪರಿವೀಕ್ಷಣಾಲಯದಲ್ಲಿನ ಸಹಾಯಕ ವಿದ್ಯುತ್ ಪರಿವೀಕ್ಷಕರು–35 ಹುದ್ದೆಗಳು Assistant Electrical Inspector – 35 posts	₹: 11400–21600	Must be a holder of degree in Electrical Engineering / Electrical & Electronics Engineering or possess equivalent qualification.	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ – 38 ಪ.ಜಾ, ಪ.ಪಂ, ಪ್ರ 1 – 40	

ಮೀಸಲಾತಿ	ಇ	ಮ	ಗ್ರಾ	ಮಾಸೈ	ಕಮಾಅ	ಒಟ್ಟು
ಪ.ಜಾ	01	02	02	01	–	06
ಪ.ಪಂ.	–	–	01	–	–	01
ಪ್ರ.1	01	–	01	–	–	02
ಪ್ರ.2(ಎ)	01	02	01	01	–	05
ಪ್ರ.2(ಬಿ)	–	–	01	–	–	01
ಪ್ರ.3(ಎ)	–	–	01	–	–	01
ಪ್ರ.3(ಬಿ)	01	–	01	–	–	02
ಸಾ.ಅ	05	05	04	02	01	17
ಒಟ್ಟು	09	09	12	04	01	35

<table>
<tr><th>1</th><th>2</th><th>3</th><th>4</th><th>5</th><th>6</th><th>7</th></tr>
<tr><td>1660–1669</td><td>02</td><td>ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿನ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ – 10 ಹುದ್ದೆಗಳು
District Disabled Welfare Officer – 10 posts</td><td>₹: 11400–21600</td><td>Must possess Masters Degree in Social Work or Master of Arts in Social Work. Preference will be given to persons who have a Diploma in teaching the blind / deaf / mentally retarded from an Institution recognized by the Rehabilitation Council of India.</td><td>ಕನಿಷ್ಠ – 18
ಗರಿಷ್ಠ – 35
ಪ್ರ. 2ಎ
ಪ್ರ 2ಬಿ
ಪ್ರ 3ಎ
ಪ್ರ 3ಬಿ } 38
ಪ.ಜಾ
ಪ.ಪಂ
ಪ್ರ 1 } 40</td><td><table><tr><th>ಮೀಸಲಾತಿ</th><th>ಇ</th><th>ಮ</th><th>ಗ್ರಾ</th><th>ಒಟ್ಟು</th></tr><tr><td>ಪ.ಜಾ</td><td>01</td><td>01</td><td>–</td><td>02</td></tr><tr><td>ಪ.ಪಂ.</td><td>01</td><td>–</td><td>–</td><td>01</td></tr><tr><td>ಪ್ರ.1</td><td>01</td><td>–</td><td>–</td><td>01</td></tr><tr><td>ಪ್ರ.2(ಎ)</td><td>01</td><td>–</td><td>–</td><td>01</td></tr><tr><td>ಸಾ.ಅ</td><td>02</td><td>02</td><td>01</td><td>05</td></tr><tr><td>ಒಟ್ಟು</td><td>06</td><td>03</td><td>01</td><td>10</td></tr></table></td></tr>
<tr><td>1670–1674</td><td>03</td><td>ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಮುಖ್ಯ ಗ್ರಂಥಾಲಯಾಧಿಕಾರಿ 05 ಹುದ್ದೆಗಳು
Chief Librarian – 05 posts</td><td>₹: 11400–21600</td><td>1) Should be a holder of a Bachelor's Degree of a University established by Law in India
ii) A degree or Diploma in Library Science of a University established by Law in India secured after one academic year's course.
2) Should have not less than three years experience in a recognized Library as Librarian/Lecturer in Library Science/Head of Technical Sections.
Provided that in the case of candidates belonging to the SC and ST to be appointed by Direct Recruitment. Candidates possessing one year experience may also be appointed.</td><td>– ಅದೇ–</td><td>ಪರಿಶಿಷ್ಟ ಜಾತಿ (ಮಹಿಳೆ) –01 ಹುದ್ದೆ
ಪ್ರವರ್ಗ–2ಬಿ (ಇತರೆ) –01 ಹುದ್ದೆ
ಸಾಮಾನ್ಯ ಅರ್ಹತೆ (ಇತರೆ) –01 ಹುದ್ದೆ
ಮಹಿಳೆ) –01 ಹುದ್ದೆ
ಗ್ರಾಮೀಣ) –01 ಹುದ್ದೆ</td></tr>
<tr><td>1675–1676</td><td>04</td><td>ಕರ್ನಾಟಕ ಗೃಹ ಮಂಡಳಿಯಲ್ಲಿನ ಸಹಾಯಕ ಅಭಿಯಂತರರು (ಸಿವಿಲ್) – 02 ಹುದ್ದೆಗಳು
Assistant Engineer (Civil)- 02 posts</td><td>₹: 11400–21600</td><td>Must be holder of a B.E. (Civil Engineering) degree.</td><td>– ಅದೇ –</td><td>ಪ್ರವರ್ಗ–3ಬಿ(ಇತರೆ)–01 ಹುದ್ದೆ
ಸಾಮಾನ್ಯ ಅರ್ಹತೆ(ಮಾಜಿ ಸೈನಿಕ)–01 ಹುದ್ದೆ</td></tr>
</table>

<table>
<tr><th>1</th><th>2</th><th>3</th><th>4</th><th>5</th><th>6</th><th>7</th></tr>
<tr>
<td>1677–1711</td>
<td>43</td>
<td>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿನ ಪರಿವೀಕ್ಷಣಾಧಿಕಾರಿ ದರ್ಜೆ–1ರ 35 ಹುದ್ದೆಗಳು
Probation Officer Grade-I 35 posts</td>
<td>₹ 11400–21600</td>
<td>Must be holder of a Master's Degree in Social Work or Home Science with specialization in Child Development or Nutrition.</td>
<td>ಕನಿಷ್ಠ – 18
ಗರಿಷ್ಠ – 35
ಪ್ರ. 2ಎ
ಪ್ರ 2ಬಿ
ಪ್ರ 3ಎ } 38
ಪ್ರ 3ಬಿ

ಪ.ಜಾ
ಪ.ಪಂ } 40
ಪ್ರ 1</td>
<td>
<table>
<tr><th>ಮೀಸಲಾತಿ</th><th>ಇ</th><th>ಮ</th><th>ಗ್ರಾ</th><th>ಮಾಸೈ</th><th>ಕಮಾಅ</th><th>ಒಟ್ಟು</th></tr>
<tr><td>ಪ.ಜಾ</td><td>01</td><td>02</td><td>01</td><td>01</td><td>–</td><td>05</td></tr>
<tr><td>ಪ.ಪಂ</td><td>–</td><td>–</td><td>01</td><td>–</td><td>–</td><td>01</td></tr>
<tr><td>ಪ್ರ.1</td><td>01</td><td>–</td><td>01</td><td>–</td><td>–</td><td>02</td></tr>
<tr><td>ಪ್ರ.2(ಎ)</td><td>02</td><td>02</td><td>01</td><td>01</td><td>–</td><td>06</td></tr>
<tr><td>ಪ್ರ.2(ಬಿ)</td><td>–</td><td>–</td><td>01</td><td>–</td><td>–</td><td>01</td></tr>
<tr><td>ಪ್ರ.3(ಎ)</td><td>–</td><td>01</td><td>01</td><td>–</td><td>–</td><td>02</td></tr>
<tr><td>ಪ್ರ.3(ಬಿ)</td><td>–</td><td>–</td><td>01</td><td>–</td><td>–</td><td>01</td></tr>
<tr><td>ಸಾ.ಅ</td><td>05</td><td>05</td><td>05</td><td>01</td><td>01</td><td>17</td></tr>
<tr><td>ಒಟ್ಟು</td><td>09</td><td>10</td><td>12</td><td>03</td><td>01</td><td>35</td></tr>
</table>
</td>
</tr>
</table>

<table>
<tr><th colspan="7">ಗ್ರೂಪ್ – 'ಸಿ' ತಾಂತ್ರಿಕ ಹುದ್ದೆಗಳು</th></tr>
<tr><th>(1)</th><th>(2)</th><th>(3)</th><th>(4)</th><th>(5)</th><th>(6)</th><th>(7)</th></tr>
<tr>
<td>225–229</td>
<td>08</td>
<td>ಎನ್.ಸಿ.ಸಿ. ನಿರ್ದೇಶನಾಲಯದಲ್ಲಿ ಏರೋ ಮಾಡೆಲಿಂಗ್ ಇನ್‌ಸ್ಟ್ರಕ್ಟರ್‌ಗಳ 05 ಹುದ್ದೆಗಳು

05 posts of Aeromodelling Instructors in NCC Directorate</td>
<td>₹. 10000–18150</td>
<td>For Recruitment of Aeromodelling Instructors:
(a)General Qualification
(I) a degree or equivalent in any discipline
(II) Should have handled on the job of Aeromodelling Assignments for a period of five years.
OR
'C' certificate from Air Wing NCC:
(III) Must have a good written and spoken knowledge of English language and the regional language of the area where the candidate is being considered for the appointment.
(b) Job related skills; (I) Should be proficient in building of following air-craft Models from the aero-modelling kits, both static and flying:-
(aa) tow line glider
(ab) Control Line Engine Model
(ac) Free Flight Engine Model
(ad) Radio Control Flying Model</td>
<td>ಕನಿಷ್ಠ – 18
ಗರಿಷ್ಠ – 35
ಪ್ರ. 2ಎ
ಪ್ರ 2ಬಿ
ಪ್ರ 3ಎ } 38
ಪ್ರ 3ಬಿ

ಪ.ಜಾ
ಪ.ಪಂ } 40
ಪ್ರ 1</td>
<td>
<table>
<tr><th>ಮೀಸಲಾತಿ</th><th>ಇ</th><th>ಮ</th><th>ಒಟ್ಟು</th></tr>
<tr><td>ಪ.ಜಾ</td><td>01</td><td>–</td><td>01</td></tr>
<tr><td>ಪ.ಪಂ.</td><td>01</td><td>–</td><td>01</td></tr>
<tr><td>ಪ್ರ.1</td><td>01</td><td>–</td><td>01</td></tr>
<tr><td>ಸಾ.ಅ</td><td>01</td><td>01</td><td>02</td></tr>
<tr><td>ಒಟ್ಟು</td><td>04</td><td>01</td><td>05</td></tr>
</table>
</td>
</tr>
</table>

				(II) Should be proficient in undertaking full set of aerobatics on control Line Engine stunt Models. (III) Should be able to dismantle, assemble and operate model Aero Engines (iv) Should be able to repair damaged models. 6. Candidates with the additional skill of building and operating Radio Control models may be given due weightage. 7. Method of selection:-Determination of level of job related skills will be through written, oral and practical tests with the following weightage: a) Written Test -25% b)Oral Test – 25% c)Practical Test – 50% (Candidate will bring one static and one operating aeromodel built: Built by him. He will be also be asked to build one operating aeromodel on his own and fly it successfully). This test will be conducted by the Board of Officers composed of following members: (a) Presiding Officer – OC Air Sqn (b) Specialist Members: One Air Force Officer on Flying/Gliding duties with the NCC & one AMI with not Less than five years of service with NCC. (c) Member in Attendance: An Officer from HQ DGNCC 8. The Board of Officers will consider all the candidates, having the General Qualification and job related skills as		

<table>
<tr><td></td><td></td><td></td><td></td><td>mentioned above, who have applied for the post of Aero modelling Instructor.
9. Appointment will be made based on the reports regarding the suitability of candidates through above tests.
10. Selected candidates will be required to give an undertaking of attending the centralized course of instructions on aero-modelling and related subjects in the NCC as and when conducted.</td><td></td><td></td></tr>
<tr><td>230–233</td><td>09</td><td>ಎನ್.ಸಿ.ಸಿ. ನಿರ್ದೇಶನಾಲಯದಲ್ಲಿ ಶಿಪ್ ಮಾಡೆಲಿಂಗ್ ಇನ್‌ಟ್ರಕ್ಟರ್ಸ್‌ಗಳ 04 ಹುದ್ದೆಗಳು
04 posts of Shipmodelling Instructors in NCC Directorate.</td><td>₹.10000–18150</td><td>For Recruitment of Ship Modelling Insturctors:
For Direct Recruitment from General Category:

(a) Degree with Physics and Mathematics subjects of study at 10+2 level, with three months ship-modelling course from any recognized ship modelling manufacturers.
OR
Certificate / Diploma in draftsmanship from ITI/ Polytechnic having done three months ship-modelling course from any recognized ship modelling manufacturers.
OR
Ex-Deckyard apprentice / Ex-shipwright.
(b) Must have a good knowledge of written and spoken English.
c) Regisitered with employment exchange/Zilla sainik Boards.

Preferential qualification:

Should have complete knowledge in Building Ship models of;
(I) Radio Controlled powered
(II) Non-Radio controlled Powered Sailing models.</td><td>ಕನಿಷ್ಠ – 18
ಗರಿಷ್ಠ – 35
ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38
ಪ.ಜಾ, ಪ.ಪಂ, ಪ್ರ 1 } 40</td><td><table><tr><th>ಮೀಸಲಾತಿ</th><th>ಇ</th><th>ಮ</th><th>ಒಟ್ಟು</th></tr><tr><td>ಪ.ಜಾ</td><td>01</td><td>–</td><td>01</td></tr><tr><td>ಪ.ಪಂ.</td><td>01</td><td>–</td><td>01</td></tr><tr><td>ಸಾ.ಅ</td><td>01</td><td>01</td><td>02</td></tr><tr><td>ಒಟ್ಟು</td><td>03</td><td>01</td><td>04</td></tr></table></td></tr>
</table>

				(b) Should be proficient in handling ship modelling stores. (c) Should have won State / Nation wise competitions while in NCC (d) Ex-cadet of NCC Naval Wing holding 'C' Certificates and should have attended RDC as a Ship-modeler. Note: 1) Checks for preferable qualifications will be through practical test under taken by the Officer Commanding of the Naval Units of NCC. Mere holding of a Certificate of having under gone ship-modelling training is not enough. 2) Appointments will be made only based on the reports regarding the suitability of candidates determined through above tests. 3) Checks for preferential qualification will be through practical tests under taken by Board of Officers composed as under: a) Presiding Officer: Group Commander b) Specialist member: i) Officer of the rank Lt Commander/Commander of the Indian Navy and ii) One ship modelling Instructor.		

<table>
<tr><th>(1)</th><th>(2)</th><th>(3)</th><th>(4)</th><th>(5)</th><th>(6)</th><th>(7)</th></tr>
<tr><td>234–238</td><td>10</td><td>ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ಗ್ರಂಥಪಾಲಕರ 05 ಹುದ್ದೆಗಳು
05 posts of Librarian in the Dept. of Public Library</td><td>₹.10000–18150</td><td>1) Should be a holder of degree in Library Science
2) Should have not less than one year's of experience in Library recognized by Govt.</td><td>ಕನಿಷ್ಠ – 18
ಗರಿಷ್ಠ – 45
ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 48
ಪ.ಜಾ, ಪ.ಪಂ, ಪ್ರ 1 } 50</td><td><table>
<tr><th>ಮೀಸಲಾತಿ</th><th>ಮ</th><th>ಗ್ರಾ</th><th>ಒಟ್ಟು</th></tr>
<tr><td>ಪ.ಜಾ</td><td>01</td><td>01</td><td>02</td></tr>
<tr><td>ಪ್ರ.2(ಎ)</td><td>01</td><td>–</td><td>01</td></tr>
<tr><td>ಸಾ.ಅ</td><td>01</td><td>01</td><td>02</td></tr>
<tr><td>ಒಟ್ಟು</td><td>03</td><td>02</td><td>05</td></tr>
</table></td></tr>
<tr><td>239–242</td><td>11</td><td>ಕರ್ನಾಟಕ ಗೃಹ ಮಂಡಳಿಯಲ್ಲಿ ಕಿರಿಯ ಅಭಿಯಂತರರ 03+01 (ಬ್ಯಾ.ಲಾ) ಹುದ್ದೆಗಳು
03+01 (B.L) posts of Junior Engineer in Karnataka Housing Board.</td><td>₹.8825–16000</td><td>Must be holder of a degree or in Diploma in Civil Engineering.</td><td>ಕನಿಷ್ಠ – 18
ಗರಿಷ್ಠ – 35
ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38
ಪ.ಜಾ, ಪ.ಪಂ, ಪ್ರ 1 } 40</td><td><table>
<tr><th>ಮೀಸಲಾತಿ</th><th>ಇ</th><th>ಮ</th><th>ಮಾ.ಸೈ</th><th>ಒಟ್ಟು</th></tr>
<tr><td>ಪ.ಪಂ. (ಬ್ಯಾ.ಲಾ)</td><td>01</td><td>–</td><td>–</td><td>01</td></tr>
<tr><td>ಪ್ರ.2(ಎ)</td><td></td><td>–</td><td>01</td><td>01</td></tr>
<tr><td>ಸಾ.ಅ</td><td>01</td><td>01</td><td>–</td><td>02</td></tr>
<tr><td>ಒಟ್ಟು</td><td>02</td><td>01</td><td>01</td><td>04</td></tr>
</table></td></tr>
<tr><td>243–249</td><td>12</td><td>ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಜವಳಿ ತನಿಖಾಧಿಕಾರಿಗಳ 07 ಹುದ್ದೆಗಳು
07 posts of Textile Inspectors in the Dept. of Handloom and Textiles.</td><td>₹.8825–16000</td><td>Must be a holder of a Diploma in Textiles Or Handloom Technology or possess an equivalent qualification.</td><td>– ಅದೇ –</td><td><table>
<tr><th>ಮೀಸಲಾತಿ</th><th>ಮ</th><th>ಗ್ರಾ</th><th>ಯೋ.ಅ</th><th>ಒಟ್ಟು</th></tr>
<tr><td>ಪ.ಜಾ</td><td>–</td><td>01</td><td>–</td><td>01</td></tr>
<tr><td>ಪ್ರ.1</td><td>01</td><td>–</td><td>–</td><td>01</td></tr>
<tr><td>ಪ್ರ.2(ಎ)</td><td>–</td><td>01</td><td>–</td><td>01</td></tr>
<tr><td>ಪ್ರ.2(ಬಿ)</td><td>01</td><td>–</td><td>–</td><td>01</td></tr>
<tr><td>ಸಾ.ಅ</td><td>01</td><td>01</td><td>01</td><td>03</td></tr>
<tr><td>ಒಟ್ಟು</td><td>03</td><td>03</td><td>01</td><td>07</td></tr>
</table></td></tr>
</table>

1	2	3	4	5	6	7
250	44	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಪ್ರೂಫ್ ರೀಡರ್ – 01 ಹುದ್ದೆ Proof Reader – 01 post	₹ 5800–10500	1) Must have passed PUC or equivalent examination; 2) Must be holder of a certificate in Teaching the Blind from any institution recognized by the Rehabilitation Council of India;	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ ಪ್ರ 2ಬಿ ಪ್ರ 3ಎ ಪ್ರ 3ಬಿ } 38 ಪ್ರ.1 ಪ.ಜಾ ಪ.ಪಂ } 40	ಪ.ಜಾ.(ಇ) – 01
251	45	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಪ್ರೂಫ್ ಪ್ರೆಸ್ ಮ್ಯಾನ್ – 01 ಹುದ್ದೆ **Proof Press Man - 01**	–ಅದೇ–	1) Must have passed PUC or equivalent examination; 2) Must be holder of a certificate in Teaching the Blind from any institution recognized by the Rehabilitation Council of India;	–ಅದೇ–	ಸಾ.ಅ.(ಇ) – 01
252	46	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಕಾಪಿ ಹೋಲ್ಡರ್ – 01 ಹುದ್ದೆ **Copy Holder – 01 post**	–ಅದೇ–	1) Must have passed PUC or equivalent examination; 2) Must be holder of a certificate in Teaching the Blind from any institution recognized by the Rehabilitation Council of India;	–ಅದೇ–	ಪ.ಜಾ(ಇ) – 01

1	2	3	4	೫	6	7
253–254	**47**	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಬೈಂಡರ್ – 02 ಹುದ್ದೆಗಳು Binder – 02 posts	**₹ 5800–10500**	1) Must have passed PUC or equivalent examination; 2) Must be a holder of an ITI Certificate in Book Binding or ITI Certificate in Mechanic Course.	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ – 38 ಪ್ರ.1, ಪ.ಜಾ, ಪ.ಪಂ 40	ಪ.ಜಾ.(ಇ) – 01 ಸಾ.ಅ(ಇ) – 01
255	**48**	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ ಪ್ರಿಂಟರ್ – 01 ಹುದ್ದೆ **Printer – 01 post**	**–ಅದೇ–**	1) Must have passed PUC or equivalent examination; 2) Must be a holder of an ITI Certificate in Printing or ITI Certificate in Mechanic Course.	**–ಅದೇ–**	ಸಾ.ಅ.(ಇ) – 01
256	**49**	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ 01 post of Speech Therapist.	**₹ 8825–16000**	Must possess a degree in Speech and hearing from the university established by Law in India.	**–ಅದೇ–**	**ಸಾ.ಅ.(ಇ) –01**

1	2	3	4	5	6	7
257–258	50	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ **02 posts of Occupational therapist/Physiothe-rapist.**	₹ 7275–13350	**1) Must have passed PUC or its equivalent examination and 2) Must possess Diploma or a Certificate in Occupational Therapy or Physio Therapy as the case may be, awarded by the State Government.**	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38 ಪ್ರ.1, ಪ.ಜಾ, ಪ.ಪಂ } 40	**ಪ.ಜಾ (ಇ) – 01** **ಸಾ.ಅ. (ಇ) – 01**
259–262	51	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ **04 posts of Music Teacher (Vocal / Instrumental) Grade-II**	₹ 6250–12000	**1) Must have passed SSLC or its equivalent examination. 2) Must have passed Senior Grade Examination and proficiency in music examination conducted by Karnataka State Secondary Education Examination Board. Only Blind candidates are eligible for applying**	–ಅದೇ–	**ಪ.ಜಾ.(ಇ) – 01** **ಪ.ಪಂ(ಇ) – 01** **ಸಾ.ಅ.(ಇ) – 01** **ಸಾ.ಅ(ಮ) – 01**

1	2	3	4	5	6	7
263–264	52	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ 02 posts of Music Teacher Grade-III	₹ 5800–10500	**1) Must have passed SSLC or its equivalent examination.** **2) Must have passed proficiency in Music Examination conducted by Government of Karnataka or any other equivalent examination .** **If no suitable candidate with the above qualification available, candidates with Senior Grade Examination in the Music of the concerned branch may be considered.** **<u>Only Blind candidates are eligible for applying</u>**	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ } 38 ಪ್ರ.1, ಪ.ಜಾ, ಪ.ಪಂ } 40	**ಪ.ಜಾ(ಇ) – 01** **ಸಾ.ಅ.(ಇ) – 01**
265–267	57	ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಲ್ಲಿ Orientation & Mobility Instructor Grade-II - 03 ಹುದ್ದೆಗಳು	₹ 6250–12000	1) Must have passed PUC or equivalent examination. 2) Must possess a Diploma or Certificate in Orientation and Mobility awarded by the National Institute for visually handicapped, Deharadun or National Institute for Visually Handicapped, Chennai or any other Institutions recognized by the State Government. <u>Only Low vision or partially blind candidates are eligible for applying</u>	–ಅದೇ–	ಪ.ಜಾ. (ಇತರೆ) – 1 ಹುದ್ದೆ ಪ.ಪಂ.(ಇತರೆ) – 1 ಹುದ್ದೆ ಸಾ.ಅ. (ಇತರೆ) – 1 ಹುದ್ದೆ

268–269	53	**ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ನಲ್ಲಿ ಪದವೀಧರ ಇಂಜಿನಿಯರ್ (ಮೆಕ್ಯಾನಿಕಲ್) – 02 ಹುದ್ದೆಗಳು** **Graduate Engineer (Mechanical) – 02 posts**	**₹** 9050–21075	**B.E. Mechanical or equivalent qualification**	ಕನಿಷ್ಠ – 21 ಗರಿಷ್ಠ – 28 ಪ್ರ. 2ಎ ಪ್ರ 2ಬಿ ಪ್ರ 3ಎ } 31 ಪ್ರ 3ಬಿ ಪ್ರ.1 ಪ.ಜಾ ಪ.ಪಂ } 33	**ಪ.ಜಾ.(ಇ) – 01** **ಸಾ.ಅ.(ಇ) – 01**
270–275	54	**ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ನಲ್ಲಿ ಪದವೀಧರ ಇಂಜಿನಿಯರ್ (ಎಲೆಕ್ಟ್ರಿಕಲ್) – 06 ಹುದ್ದೆಗಳು** **Graduate Engineer (Electrical) – 06 posts**	**₹** 9050–21075	**B.E. Electrical or equivalent qualification**	–ಅದೇ–	**ಪ.ಜಾ.(ಇ) – 01** **ಪ.ಪಂ.(ಇ) – 01** **ಪ್ರ.1 (ಇ) – 01** **ಸಾ.ಅ.(ಇ) – 01** **ಸಾ.ಅ(ಮ) – 01** **ಸಾ.ಅ(ಗ್ರಾ) – 01**
276–277	55	**ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ನಲ್ಲಿ ಫೋರ್‌ಮೆನ್ (ಮೆಕ್ಯಾನಿಕಲ್) – 02 ಹುದ್ದೆಗಳು** **Foreman (Mechanical) - 02 posts**	**₹** 2131–8706 **(ಪರಿಷ್ಕರಣೆ ಯಲ್ಲಿದೆ)**	**Diploma in Mechanical Engineering**	–ಅದೇ–	**ಪ.ಜಾ.(ಇ) – 01** **ಸಾ.ಅ.(ಇ) – 01**
278–285	56	**ದಿ ಮೈಸೂರ್ ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ನಲ್ಲಿ ಪೋರ್ ಮೆನ್ (ಎಲೆಕ್ಟ್ರಿಕಲ್) – 08 ಹುದ್ದೆಗಳು** **Foreman (Electrical) - 08 posts**	**₹** 2131–8706 **(ಪರಿಷ್ಕರಣೆ ಯಲ್ಲಿದೆ)**	**Diploma in Electrical Engineering**	–ಅದೇ–	**ಪ.ಜಾ.(ಇ) – 01** **ಪ.ಪಂ.(ಇ) – 01** **ಪ್ರ.1 (ಇ) – 01** **ಪ್ರ.2(ಎ)(ಇ) – 01** **ಸಾ.ಅ.(ಇ) – 02** **ಸಾ.ಅ(ಮ) – 01** **ಸಾ.ಅ(ಗ್ರಾ) – 01**

ಭಾಗ–'2'

(ತಾಂತ್ರಿಕೇತರ ಹುದ್ದೆಗಳು)

ಹುದ್ದೆಗಳ ಅನುಕ್ರಮ ಸಂಖ್ಯೆ	ಹುದ್ದೆಯ ಸಂಕೇತ/ POST CODE	ಇಲಾಖೆಯ ಹೆಸರು ಹುದ್ದೆಯ ಪದನಾಮ ಮತ್ತು ಸಂಖ್ಯೆ	ವೇತನ ಶ್ರೇಣಿ	ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ	ವಯೋಮಿತಿ (ವಯಸ್ಸು ವರ್ಷಗಳಲ್ಲಿ)	ಹುದ್ದೆಗಳ ವರ್ಗೀಕರಣ
(1)	(2)	(3)	(4)	(5)	(6)	(7)
ಗ್ರೂಪ್– ' ಬಿ ' ಹುದ್ದೆಗಳು						
593-596	05	ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿನ ಸಹಾಯಕ ಕಾರ್ಯದರ್ಶಿ – 04 ಹುದ್ದೆಗಳು **Asst. Secretary in KIADB-04 posts**	₹.15,200-25,650	A first class degree from a recognized University together with a Degree in Law with an experience of minimum 3 years in a similar post in Government/Quasi Government and Commercial Organisation.	ಕನಿಷ್ಠ – 18 ಗರಿಷ್ಠ – 35 ಪ್ರ. 2ಎ, ಪ್ರ 2ಬಿ, ಪ್ರ 3ಎ, ಪ್ರ 3ಬಿ – 38 ಪ.ಜಾ, ಪ.ಪಂ, ಪ್ರ 1 – 40	**ಪರಿಶಿಷ್ಟ ಜಾತಿ(ಇತರೆ) – 01 ಹುದ್ದೆ** **ಪರಿಶಿಷ್ಟ ಪಂಗಡ(ಇತರೆ)– 01 ಹುದ್ದೆ** **ಸಾಮಾನ್ಯ ಅರ್ಹತೆ – 02 ಹುದ್ದೆಗಳು(ಇತರೆ–01; ಮಹಿಳೆ–01)**
597-620	06	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿನ ಸಂರಕ್ಷಣಾಧಿಕಾರಿ – 24 ಹುದ್ದೆಗಳು. **Protection Officers in the Department of Women and Child Development-24 posts**	₹.11,400-21,600	ಮಹಿಳಾ ಕಾನೂನು ಪದವೀಧರರು.	–ಅದೇ–	See table below. ಈ ಹುದ್ದೆಗಳಿಗೆ ಮಹಿಳಾ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ಮೀಸಲಾತಿ	ಮಹಿಳೆ	ಗ್ರಾ	ಮಾ.ಸೈ.	ಒಟ್ಟು
ಪ.ಜಾ	03	01	–	04
ಪ.ಪಂ	01	–	–	01
ಪ್ರ.1	01	–	–	01
ಪ್ರ.2(ಎ)	02	01	–	03
ಪ್ರ.2(ಬಿ)	01	–	–	01
ಪ್ರ.3(ಎ)	01	–	–	01
ಪ್ರ.3(ಬಿ)	01	–	–	01
ಸಾ.ಅ	08	03	01	12
ಒಟ್ಟು	18	05	01	24

ಈ ಹುದ್ದೆಗಳಿಗೆ ಮಹಿಳಾ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

<table>
<tr><th colspan="7"><u>ಗ್ರೂಪ್– ‘ ಸಿ ’ ಹುದ್ದೆಗಳು</u></th></tr>
<tr><th>(1)</th><th>(2)</th><th>(3)</th><th>(4)</th><th>(5)</th><th>(6)</th><th>(7)</th></tr>
<tr>
<td>621-630</td>
<td>40</td>
<td>ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಸಹಾಯಕ ಗ್ರಂಥಪಾಲಕರು– 10 ಹುದ್ದೆಗಳು
Assistant Librarian in the Department of Public Libraries- 10 posts.</td>
<td>₹.8,000-14,800</td>
<td>1) Should be holder of a diploma in Library Science awarded by the board of Technical Education or equivalent qualification.
2) Should have not less than one year’s experience in a library recognised by Government.</td>
<td>ಕನಿಷ್ಠ – 18
ಗರಿಷ್ಠ – 45
ಪ್ರ. 2ಎ
ಪ್ರ 2ಬಿ
ಪ್ರ 3ಎ } 48
ಪ್ರ 3ಬಿ
ಪ.ಜಾ
ಪ.ಪಂ } 50
ಪ್ರ 1</td>
<td>
<table>
<tr><th>ಮೀಸಲಾತಿ</th><th>ಇತರೆ</th><th>ಮ</th><th>ಗ್ರಾ</th><th>ಮಾ.ಸೈ.</th><th>ಅಂ.ವಿ.</th><th>ಒಟ್ಟು</th></tr>
<tr><td>ಪ.ಜಾ</td><td>01</td><td>–</td><td>–</td><td>–</td><td>–</td><td>01</td></tr>
<tr><td>ಪ.ಪಂ</td><td>–</td><td>01</td><td>–</td><td>–</td><td>–</td><td>01</td></tr>
<tr><td>ಪ್ರ.2(ಎ)</td><td>01</td><td>–</td><td>01</td><td>–</td><td>–</td><td>02</td></tr>
<tr><td>ಪ್ರ.3(ಬಿ)</td><td>–</td><td>01</td><td>–</td><td>–</td><td>–</td><td>01</td></tr>
<tr><td>ಸಾ.ಅ</td><td>01</td><td>01</td><td>01</td><td>01</td><td>01</td><td>05</td></tr>
<tr><td>ಒಟ್ಟು</td><td>03</td><td>03</td><td>02</td><td>01</td><td>01</td><td>10</td></tr>
</table>
ಸಾ.ಅ. ಅಂಗವಿಕಲ ಮೀಸಲಾತಿಗೆ ಮೀಸಲಿರುವ ಒಂದು ಹುದ್ದೆಗೆ ಚಲನ–ವಲನ ವೈಕಲ್ಯವುಳ್ಳ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು.
</td>
</tr>
<tr>
<td>631-650</td>
<td>41</td>
<td>ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಗ್ರಂಥಾಲಯ ಸಹಾಯಕರು – 20 ಹುದ್ದೆಗಳು
Library Assistant in the Department of Public Libraries- 20 posts.</td>
<td>₹.6,250-12,000</td>
<td>1) Should be a holder of a Certificate in Library Science awarded by the Government Library Training School, Bangalore or equivalent qualification.
2) Should have not less than one year’s experience in a library recognised by the Government.</td>
<td>– ಅದೇ –</td>
<td>
<table>
<tr><th>ಮೀಸಲಾತಿ</th><th>ಇತರೆ</th><th>ಮ</th><th>ಗ್ರಾ</th><th>ಮಾ.ಸೈ.</th><th>ಕ.ಮಾ..ಅ</th><th>ಯೋ.ಅ</th><th>ಅಂ.ವಿ.</th><th>ಒಟ್ಟು</th></tr>
<tr><td>ಪ.ಜಾ</td><td>–</td><td>01</td><td>01</td><td>–</td><td>–</td><td>–</td><td>01**</td><td>03</td></tr>
<tr><td>ಪ.ಪಂ</td><td>–</td><td>–</td><td>01</td><td>–</td><td>–</td><td>–</td><td>–</td><td>01</td></tr>
<tr><td>ಪ್ರ.1</td><td>–</td><td>01</td><td>–</td><td>–</td><td>–</td><td>–</td><td>–</td><td>01</td></tr>
<tr><td>ಪ್ರ.2(ಎ)</td><td>–</td><td>01</td><td>01</td><td>–</td><td>–</td><td>–</td><td>–</td><td>02</td></tr>
<tr><td>ಪ್ರ.2(ಬಿ)</td><td>–</td><td>01</td><td>–</td><td>–</td><td>–</td><td>–</td><td>–</td><td>01</td></tr>
<tr><td>ಪ್ರ3(ಎ)</td><td>01</td><td>–</td><td>–</td><td>–</td><td>–</td><td>–</td><td>–</td><td>01</td></tr>
<tr><td>ಪ್ರ.3(ಬಿ)</td><td>–</td><td>–</td><td>–</td><td>–</td><td>01</td><td>–</td><td>–</td><td>01</td></tr>
<tr><td>ಸಾ.ಅ</td><td>02</td><td>03</td><td>02</td><td>01</td><td>–</td><td>01</td><td>01**</td><td>10</td></tr>
<tr><td>ಒಟ್ಟು</td><td>03</td><td>07</td><td>05</td><td>01</td><td>01</td><td>01</td><td>02</td><td>20</td></tr>
</table>
ಅಂಗವಿಕಲರಿಗೆ ಮೀಸಲಿರುವ 02 ಹುದ್ದೆಗಳನ್ನು ಶ್ರವಣದೋಷ ಇರುವ ಅಭ್ಯರ್ಥಿಗಳಿಗೆ ಮಾತ್ರ ಮೀಸಲಿಡಲಾಗಿದೆ. ಆದರೆ ಅರ್ಹ ಶ್ರವಣದೋಷ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಈ ಹುದ್ದೆಗೆ ನಿಗದಿಪಡಿಸಿದ ಇತರೆ ಅಂಗವೈಕಲ್ಯತೆಗಳಾದ ಕುಷ್ಠರೋಗದಿಂದ ಗುಣಮುಖರಾದ / ಚಲನ ವಲನ ವೈಕಲ್ಯವುಳ್ಳ / ಮಾನಸಿಕ ಅಸ್ವಸ್ಥ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.
</td>
</tr>
</table>

ಭಾಗ–'3'

(ವಿಶೇಷ ನೇಮಕಾತಿ ನಿಯಮಗಳು 2001ರನ್ವಯ ಭರ್ತಿ ಮಾಡಬೇಕಾದ ಬ್ಯಾಕ್‌ಲಾಗ್ ಹುದ್ದೆಗಳು)

(1)	(2)	(3)	(4)	(5)	(6)	(7)
			ಗ್ರೂಪ್ 'ಎ' ಬ್ಯಾಕ್‌ಲಾಗ್ ಹುದ್ದೆ			
01	42	ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಲ್ಲಿನ ಬಂದರು ಅಧಿಕಾರಿ / ಉಪ ನಿರ್ದೇಶಕರು – 01 ಹುದ್ದೆ. **Port Officer/ Deputy Director in the department of Ports and Inland Water Transport- 01 Post.**	₹.18,150-26,925	**1) Must be holder of a Certificate of Competency issued under t`he Merchant Shipping Act, 1958 having validity throughout the Commonwealth as Master Foreign Going Steamships.** **2) Must have served as Chief Officer of a ship.** **3) Must have the following visual standard with or without glasses.** Right eye / Left eye; **Distant Vision V:6/6 V: 6/6**; Near Vision 0.6 0.6. Each eye must have a full field of vision, squint or any morbid condition of the eye or of the eye lids (Trachoma like) of either eye shall be deemed to be a disqualification.	ಕನಿಷ್ಠ – 18 ಗರಿಷ್ಠ – 40	ಪರಿಶಿಷ್ಟ ಪಂಗಡ (ಇತರೆ) 01 ಹುದ್ದೆ.
			ಗ್ರೂಪ್ 'ಬಿ' ಬ್ಯಾಕ್‌ಲಾಗ್ ಹುದ್ದೆಗಳು			
02-03	07	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿನ ಸಹಾಯಕ ನಿರ್ದೇಶಕರು–02 ಹುದ್ದೆಗಳು **Asst. Director in the dept. of Kannada and Culture- 02 Posts**	₹.11,400-21,600	Must possess Bachelor's Degree with Kannada as Major subject/Main subject.	– ಅದೇ –	ಪರಿಶಿಷ್ಟ ಜಾತಿ(ಇತರೆ) 01 ಹುದ್ದೆ ಪರಿಶಿಷ್ಟ ಪಂಗಡ(ಇತರೆ) 01 ಹುದ್ದೆ.

ಮಹಿಳೆಯರಿಗೆ / ಮಾಜಿ ಸೈನಿಕರಿಗೆ / ಗ್ರಾಮೀಣ / ಕಮಾಅ /ಅಂಗವಿಕಲ /ಯೋಜನೆ ನಿರ್ವಸಿತ ಅಭ್ಯರ್ಥಿಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗೆ ಅರ್ಹ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಅಂತಹ ರಿಕ್ತ ಸ್ಥಾನಗಳನ್ನು ಆಯಾ ವರ್ಗಕ್ಕೆ ಸೇರಿದ ಇತರೆ ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುವುದು.

ಸಂಕ್ಷೇಪ:– ಇ – ಇತರೆ / ಮ – ಮಹಿಳೆ / ಗ್ರಾ – ಗ್ರಾಮೀಣ / ಮಾ.ಸೈ – ಮಾಜಿ ಸೈನಿಕ / ಕ.ಮಾ.ಅ. – ಕನ್ನಡ ಮಾಧ್ಯಮದ ಅಭ್ಯರ್ಥಿ/ ಪ.ಜಾ – ಪರಿಶಿಷ್ಟ ಜಾತಿ / ಪ.ಪಂ. – ಪರಿಶಿಷ್ಟ ಪಂಗಡ / ಪ್ರ.–ಪ್ರವರ್ಗ / ಸಾ.ಅ.–ಸಾಮಾನ್ಯ ಅರ್ಹತೆ / ಅಂ.ವಿ–ಅಂಗ ವಿಕಲ/ಯೋ.ಅ–ಯೋಜನಾ ನಿರಾಶ್ರಿತರು.

ಡಾ. ಡಿ.ಎಸ್.ವಿಶ್ವನಾಥ್
ಕಾರ್ಯದರ್ಶಿ
ಕರ್ನಾಟಕ ಲೋಕ ಸೇವಾ ಆಯೋಗ.

ಪಿ.ಆರ್.21

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಗ್ರಾಮಲೆಕ್ಕಿಗರ ನೇರ ನೇಮಕಾತಿ ಆಯ್ಕೆ ಪ್ರಾಧಿಕಾರ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.

ಸಂ:ಗ್ರಾಲೆ:ಸಿಬ್ಬಂದಿ:ಸಿಆರ್–40/2009–10, ದಿನಾಂಕ:19–1–2012

ಅಧಿಸೂಚನೆ

ವಿಷಯ: ಚಿತ್ರದುರ್ಗ ಜಿಲ್ಲಾ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧಿಸೂಚನೆ ಸಂ:ಆರ್‌ಡಿ–299:ಬಿಎಸ್‌ಸಿ–2006 ದಿನಾಂಕ:3–2–2009.
2) ಸರ್ಕಾರದ ಪತ್ರ ಸಂ:ಕಂಇ–4:ಬಿಎಸ್‌ಸಿ–2011 ದಿನಾಂಕ:25–2–2011.
3) ಈ ಪ್ರಾಧಿಕಾರದ ಸಮಸಂಖ್ಯೆ ಅಧಿಸೂಚನೆ ದಿ:19–1–12.

ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಚಿತ್ರದುರ್ಗ ಜಿಲ್ಲಾ ಕಂದಾಯ ಘಟಕದಲ್ಲಿ ಬರುವ ತಾಲ್ಲೂಕುಗಳಲ್ಲಿ 2009ನೇ ಸಾಲಿನಲ್ಲಿ 60 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳ ನೇರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಸದರಿ ಹುದ್ದೆಗಳಲ್ಲಿ 10 ಹುದ್ದೆಗಳು ಖಾಲಿ ಉಳಿದಿರುತ್ತವೆ. ಆ ನಂತರ ವಯೋ ನಿವೃತ್ತಿ, ರಾಜೀನಾಮೆ, ಮುಂಬಡ್ತಿ, ವರ್ಗಾವಣೆ ಇನ್ನಿತರೆ ಕಾರಣಗಳಿಂದಾಗಿ 30 ಹುದ್ದೆಗಳು ತೆರವಾಗಿವೆ. ಆದುದರಿಂದ ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ಕರ್ನಾಟಕ ಸಾಮಾನ್ಯ ಸೇವೆಗಳು (ರೆವಿನ್ಯೂ ಸಬಾರ್ಡಿನೇಟ್ ಬ್ರಾಂಚ್) (ಕೇಡರ್ ಅಂಡ್ ರಿಕ್ರ್ಯೂಟ್‌ಮೆಂಟ್) (ತಿದ್ದುಪಡಿ) ನಿಯಮಗಳು 2008 ಮತ್ತು 2009ರನ್ವಯ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರದ ಪತ್ರ ಸಂ:ಕಂಇ–4:ಬಿಎಸ್‌ಸಿ–2011 ದಿನಾಂಕ:25–2–2011ರಲ್ಲಿ ಅನುಮೋದನೆ ನೀಡಿದೆ. ಅದರಂತೆ ಒಟ್ಟು 40 ಗ್ರಾಮಲೆಕ್ಕಾಧಿಕಾರಿಗಳ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಎಲ್ಲಾ ವಿವರಗಳೊಂದಿಗೆ ಭರ್ತಿ ಮಾಡಿದ ಅರ್ಜಿಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಗ್ರಾಮಲೆಕ್ಕಿಗರ ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರ, ಚಿತ್ರದುರ್ಗ ಜಿಲ್ಲೆ ಇವರಿಗೆ ದಿ:17–2–2012ರ ಸಂಜೆ 5–00 ಗಂಟೆಯೊಳಗೆ ಅಥವಾ ಅದಕ್ಕೂ ಮುಂಚಿತವಾಗಿ ತಲುಪುವಂತೆ ಅಂಚೆ ಅಥವಾ ಕೋರಿಯರ್ ಮೂಲಕ ಕಳುಹಿಸುವುದು. ಅರ್ಜಿಗಳನ್ನು ಮುದ್ದಾಂ ಸ್ವೀಕರಿಸಲಾಗುವುದಿಲ್ಲ.

ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಅಥವಾ ಹೆಚ್ಚು ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಮಾತ್ರ ಅಧಿಕಾರವಿರುತ್ತದೆ.

ಹುದ್ದೆಗಳ ವಿವರ:

ಕ್ರ.ಸಂ	ಹುದ್ದೆಯ ಹೆಸರು	ಒಟ್ಟು ಹುದ್ದೆ	ವಿದ್ಯಾರ್ಹತೆ	ವೇತನ ಶ್ರೇಣಿ
1	ಗ್ರಾಮಲೆಕ್ಕಾಧಿಕಾರಿ	40	ಪಿ.ಯು.ಸಿ. ಅಥವಾ (ಸಿಬಿಎಸ್‌ಇ/ ಐಸಿಎಸ್‌ಇ) 12ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.	5800–100:6000–125:6500–150: 7100–175:7800–200:8600–225:9500–250: 10500

ಮೀಸಲಾತಿ ವರ್ಗೀಕರಣ:

2009–10ನೇ ಸಾಲಿನಲ್ಲಿ ನೇರ ನೇಮಕಾತಿಯಿಂದ ಭರ್ತಿಯಾಗದೇ ಉಳಿದ ಖಾಲಿ ಹುದ್ದೆಗಳು

ಕ್ರ. ಸಂ:	ಮೀಸಲಾತಿ	ಸಾಮಾನ್ಯ	ಮಹಿಳೆ	ಗ್ರಾಮೀಣ	ಅಂಗವಿಕಲ	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ಒಟ್ಟು
1	**2**	**3**	**4**	**5**	**6**	**7**	**8**	**9**	**10**
1	ಸಾಮಾನ್ಯ	–	–	–	–	1	–	–	1
2	ಪ.ಜಾತಿ	1	1	–	–	–	–	–	2
3	ಪ.ಪಂ	1	–	–	–	–	–	–	1
4	ಪ್ರ.ವ–1	1	–	–	–	–	–	–	1
5	ಪ್ರವ–2(ಎ)	2	1	–	–	–	–	–	3
6	ಪ್ರವ–2(ಬಿ)	–	–	–	–	–	–	–	–
7	ಪ್ರವ–3(ಎ)	–	–	–	–	–	–	–	–
8	ಪ್ರವ–3(ಬಿ)	1	–	1	–	–	–	–	2
	ಒಟ್ಟು	**6**	**2**	**1**	**–**	**1**	**–**	**–**	**10**

2011–12ನೇ ಸಾಲಿನಲ್ಲಿ ಖಾಲಿ ಇರುವ ಹುದ್ದೆಗಳ ವರ್ಗೀಕರಣ

ಕ್ರ ಸಂ:	ಮೀಸಲಾತಿ	ಶೇಕಡ ಪ್ರಮಾಣ ಮೀಸಲಾತಿ	ಸಾಮಾನ್ಯ	ಮಹಿಳೆ	ಗ್ರಾಮೀಣ	ಅಂಗವಿಕಲ	ಮಾಜಿ ಸೈನಿಕರು	ಕನ್ನಡ ಮಾಧ್ಯಮ	ಯೋಜನಾ ನಿರಾಶ್ರಿತರು	ಒಟ್ಟು
1	**2**	**3**	**4**	**5**	**6**	**7**	**8**	**9**	**10**	**11**
1	ಸಾಮಾನ್ಯ	50	3	5	3	1	1	1	1	**15**
2	ಪ.ಜಾತಿ	15	1	1	1	–	–	1	–	**4**
3	ಪ.ಪಂ	3	–	–	1	–	–	–	–	**1**
4	ಪ್ರ.ವ–1	4	–	–	–	1	–	–	–	**1**
5	ಪ್ರವ–2(ಎ)	15	1	1	1	–	1	–	–	**4**
6	ಪ್ರವ–2(ಬಿ)	4	–	–	1	1	–	–	–	**2**
7	ಪ್ರವ–3(ಎ)	4	–	–	1	–	–	–	–	**1**
8	ಪ್ರವ–3(ಬಿ)	5	–	–	1	1	–	–	–	**2**
	ಒಟ್ಟು	**100**	**5**	**7**	**9**	**4**	**2**	**2**	**1**	**30**

ಅಭ್ಯರ್ಥಿಗಳಿಗೆ ಸೂಚನೆ ಮತ್ತು ಷರತ್ತುಗಳು:

1) ಅರ್ಜಿಗಳನ್ನು ಅಂಚೆ ಅಥವಾ ಕೋರಿಯರ್ ಮೂಲಕ ಮಾತ್ರ ಕಳುಹಿಸತಕ್ಕದ್ದು. ಖುದ್ದಾಗಿ ಸ್ವೀಕರಿಸಲಾಗುವುದಿಲ್ಲ.
2) **ವಯೋಮಿತಿ:** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕದಂದು ಕೆಳಕಂಡ ವಯೋಮಿತಿ ಹೊಂದಿರತಕ್ಕದ್ದು.

ಸಾಮಾನ್ಯ ವರ್ಗ	ಕನಿಷ್ಟ 18 ಗರಿಷ್ಟ 35 ವರ್ಷ
2ಎ, 2ಬಿ. 3ಎ, 3ಬಿ	ಕನಿಷ್ಟ 18 ಗರಿಷ್ಟ 38 ವರ್ಷ
ಪ.ಜಾತಿ/ಪ.ಪಂಗಡ ಪ್ರ–1	ಕನಿಷ್ಟ 18 ಗರಿಷ್ಟ 40 ವರ್ಷ

ಈ ಕೆಳಗಿನ ಸಂದರ್ಭಗಳಲ್ಲಿ ನೇಮಕಾತಿಯ ಗರಿಷ್ಟ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು.

ಅ) ಅಭ್ಯರ್ಥಿಯು ಮಾಜಿ ಸೈನಿಕನಾಗಿದ್ದಲ್ಲಿ ಅವನು ಕೇಂದ್ರ ಸಶಸ್ತ್ರ ದಳದಲ್ಲಿ ಎಷ್ಟು ವರ್ಷ ಸೇವೆ ಸಲ್ಲಿಸಿರುವನೋ ಅಷ್ಟು ವರ್ಷಗಳಿಗೆ ಮೂರು ವರ್ಷಗಳನ್ನು ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳು.

ಆ) ಅಭ್ಯರ್ಥಿಯು ಅಂಗವಿಕಲನಾಗಿದ್ದರೆ 10 ವರ್ಷಗಳು

ಇ) ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ 10 ವರ್ಷಗಳು

3) ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ.
4) ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಮಾತ್ರ ಅರ್ಜಿ ಸಲ್ಲಿಸಬೇಕು. ಅರ್ಜಿಯನ್ನು ಜಿಲ್ಲಾಧಿಕಾರಿಗಳ ಕಛೇರಿಯ ವೆಬ್‌ಸೈಟ್ http://chitradurga.nic.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು, ಅರ್ಜಿಯನ್ನು ಜಿಲ್ಲಾಧಿಕಾರಿಗಳ ಕಛೇರಿಯಿಂದ ಒದಗಿಸಲಾಗುವುದಿಲ್ಲ. ಲಕೋಟೆಯ ಮೇಲೆ ಅರ್ಜಿ ಸಲ್ಲಿಸುವ ಹುದ್ದೆಯ ಹೆಸರನ್ನು ನಮೂದಿಸಿರಬೇಕು.
5) ನಿಗದಿತ ದಿನಾಂಕದ ನಂತರ ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
6) ಸರ್ಕಾರಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿಯನ್ನು ನೇಮಕಾತಿ ಪ್ರಾಧಿಕಾರ/ ಇಲಾಖಾ ಮುಖ್ಯಸ್ಥರ ಮುಖಾಂತರ ಸಲ್ಲಿಸುವುದು.
7) ಅಭ್ಯರ್ಥಿಯು ತನ್ನ ಇತ್ತೀಚಿನ ಭಾವಚಿತ್ರವೊಂದನ್ನು ಅರ್ಜಿಯ ಬಲಗಡೆ ಮೇಲ್ಭಾಗದಲ್ಲಿ ಅಂಟಿಸಬೇಕು.
8) ಅಭ್ಯರ್ಥಿಗಳ ಆಯ್ಕೆ ಬಗ್ಗೆ ಪ್ರಚಾರ ಅಥವಾ ಶಿಫಾರಸ್ಸುಗಳನ್ನು ಮಾಡಿದರೆ ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವುದು.
9) ಅರ್ಜಿದಾರರೊಡನೆ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
10) ಜಾತಿಯಡಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರದ ಬಗ್ಗೆ ಜಿಲ್ಲಾಧಿಕಾರಿಗಳು (ಅಧ್ಯಕ್ಷರು, ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿ) ರವರಿಂದ ಸಿಂಧುತ್ವ ಪ್ರಮಾಣ ಪತ್ರ ಪಡೆದ ನಂತರ ನೇಮಕಾತಿ ಆದೇಶ ನೀಡಲಾಗುವುದು.

ನೇಮಕಾತಿ ಬಗ್ಗೆ ಅಂತಿಮ ತೀರ್ಮಾನವನ್ನು ನೇಮಕಾತಿ ಪ್ರಾಧಿಕಾರಿಯಾದ ಜಿಲ್ಲಾಧಿಕಾರಿಗಳು, ಚಿತ್ರದುರ್ಗರವರು ಕಾಯ್ದಿರಿಸಿಕೊಂಡಿರುತ್ತಾರೆ.

11) **ಅರ್ಜಿ ಶುಲ್ಕದ ವಿವರ:** ಪ.ಜಾತಿ/ಪ. ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ರೂ.50–00 ಹಾಗೂ ಇತರರಿಗೆ ರೂ.100–00 ಗಳ ಡಿ.ಡಿ.ಯನ್ನು ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ ಇವರ ಹೆಸರಿಗೆ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಮಾತ್ರ ಪಡೆದು, ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಹಾಗೂ ಡಿ.ಡಿ. ಹಿಂದೆ ಹೆಸರು ಮತ್ತು ವಿಳಾಸವನ್ನು ನಮೂದಿಸತಕ್ಕದ್ದು. ಡಿ.ಡಿ.ಯನ್ನು ಲಗತ್ತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

12) ಸಹಿ ಮಾಡದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

13) ಆಯ್ಕೆಯನ್ನು ಅಭ್ಯರ್ಥಿಯ **ಮೆರಿಟ್ ಆಧಾರದ** ಮೇಲೆ ಮಾತ್ರ ಪರಿಗಣಿಸಲಾಗುವುದು.

14) ಅಂಚೆ ವಿಳಂಬಕ್ಕೆ ಜಿಲ್ಲಾಧಿಕಾರಿಗಳ ಕಛೇರಿಯು ಜವಾಬ್ದಾರರಾಗುವುದಿಲ್ಲ.

15) ಜಾತಿ/ಮೀಸಲಾತಿ ಪ್ರಮಾಣ ಪತ್ರಗಳು:

ಮೀಸಲಾತಿ ಸೌಲಭ್ಯ ಅಪೇಕ್ಷಿಸುವ ಅಭ್ಯರ್ಥಿಗಳು ಈ ಕೆಳಕಂಡ ದಾಖಲೆಗಳ ಪ್ರತಿಗಳನ್ನು ಅರ್ಜಿ ಸಲ್ಲಿಸುವ ದಿನಾಂಕದಂದು ನಿಗದಿತ ನಮೂನೆಯಲ್ಲಿ ಸಂಬಂಧಪಟ್ಟ ರೆವಿನ್ಯೂ ಪ್ರಾಧಿಕಾರದಿಂದ ಪಡೆದು ಲಗತ್ತಿಸಬೇಕು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಮೀಸಲಾತಿಯನ್ನು ರದ್ದುಪಡಿಸಿ ಅವರ ಅಭ್ಯರ್ಥಿತನವನ್ನು ನಿಯಮಾನುಸಾರ ಸಾಮಾನ್ಯ ಅರ್ಹತೆ ಅಡಿಯಲ್ಲಿ ಪರಿಗಣಿಸಲಾಗುವುದು.

ಪ.ಜಾತಿ/ಪ. ಪಂಗಡ, ಪ್ರವರ್ಗ–1	ಸರ್ಕಾರದ ಅಧಿಸೂಚನೆ ಸಂ:SWD 132 SAD 97 ದಿ:8–2–2000 ಕ್ರಮವಾಗಿ ನಮೂನೆ–1 ಮತ್ತು 2
ಪ್ರವರ್ಗ–2ಎ, 2ಬಿ, 3ಎ, 3ಬಿ	ಸರ್ಕಾರದ ಅಧಿಸೂಚನೆ ಸಂ:SWD 126 BCA ದಿ:13–2–2003 (ಕರ್ನಾಟಕ ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟುಗಳು ಮತ್ತು ಹಿಂದುಳಿದ ವರ್ಗಗಳ ನೇಮಕಾತಿ ಮುಂತಾದ ಮೀಸಲಾತಿ ತಿದ್ದುಪಡಿ) ನಿಯಮಗಳು 2000ರನ್ವಯ ನಮೂನೆ–3

ಮೀಸಲಾತಿ ಪ್ರಮಾಣ ಪತ್ರಗಳು ಚಾಲ್ತಿಯಲ್ಲಿರಬೇಕು.

16) ಯೋಜನಾ ನಿರಾಶ್ರಿತರಾದ ಕುಟುಂಬದ ಅಭ್ಯರ್ಥಿಗಳು:

ಸರ್ಕಾರಿ ಆದೇಶ ಸಂ:ಸಿಆಸುಇ–71:ಸೇನೇನಿ–2001 ದಿ:24–10–2002ರನ್ವಯ ಶೇಕಡ 5ರಷ್ಟು ಹುದ್ದೆಗಳನ್ನು ಯೋಜನಾ ನಿರಾಶ್ರಿತರ ಗುಂಪಿಗೆ ಮೀಸಲಿಡಲಾಗಿದೆ. ಈ ಹುದ್ದೆಗಳನ್ನು ಕ್ಲೇಮು ಮಾಡುವ ಅಭ್ಯರ್ಥಿಗಳು ಸಂಬಂಧಿಸಿದ ತಹಶೀಲ್ದಾರ್‌ರವರು ನೀಡಿದ ಪ್ರಮಾಣ ಪತ್ರಗಳನ್ನು ಲಗತ್ತಿಸಬೇಕು.

17) ಮಾಜಿ ಸೈನಿಕರ ಕುಟುಂಬದ ಅಭ್ಯರ್ಥಿಗಳು:

ಮಾಜಿ ಸೈನಿಕರು ಎನ್ನುವ ಬಗ್ಗೆ ಅಥವಾ ಭಾರತ ದೇಶದ ಒಕ್ಕೂಟದ ಸಶಸ್ತ್ರ ದಳದಲ್ಲಿ ಸೇವೆ ಸಲ್ಲಿಸುತ್ತಿರುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ಅಂಗಹೀನರಾದ ವ್ಯಕ್ತಿಗಳ ಕುಟುಂಬದ ಸದಸ್ಯರು ಎಂಬ ಬಗ್ಗೆ ಸಕ್ಷಮ ಮಿಲಿಟರಿ ಅಧಿಕಾರಿಗಳಿಂದ ಪ್ರಮಾಣ ಪತ್ರವನ್ನು ಪಡೆದಿರಬೇಕು

18) ಅಂಗವಿಕಲ ಅಭ್ಯರ್ಥಿಗಳು:

ಅಂಗವಿಕಲ ಅಭ್ಯರ್ಥಿ ಎಂದರೆ ಸರ್ಕಾರದ ಆದೇಶ ಸಂ:ಡಿಪಿಎಆರ್–52:ಎಸ್‌ಆರ್‌ಆರ್ 99 ದಿ:29–11–2002ರಂತೆ

ಎ) ಕುಷ್ಠರೋಗ ನಿವಾರಿತರು

ಬಿ) ಶ್ರವಣ ದೋಷ ಉಳ್ಳವರು ಅಂದರೆ 70 ಡಿಸಿಬಲ್ಸ್ ಮತ್ತು ಅದಕ್ಕಿಂತ ಹೆಚ್ಚು

ಸಿ) ಮಾನಸಿಕ ಅಸ್ವಸ್ಥತೆಯಿಂದ ಗುಣಮುಖರಾಗಿರುವವರು

ಡಿ)ಮೂಳೆಗಳು, ಮಾಂಸಖಂಡಗಳು ಮತ್ತು ಕೀಲುಗಳು ವಾಡಿಕೆಯ ಕಾರ್ಯನಿರ್ವಹಣೆಗೆ ಅಡಚಣೆಯಾಗುವಂತಹ ದೈಹಿಕ ದೋಷ ಅಥವಾ ವಿಕಲತೆ ಹೊಂದಿರುವ ವ್ಯಕ್ತಿಗಳು ಅರ್ಹರಾಗಿರುವುದಿಲ್ಲ.

ಇ) ರಾಜ್ಯದ ಸರ್ಕಾರಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿರುವ ವೈದ್ಯರು ಅಂಗವಿಕಲರಿಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಲು ಅಧಿಕಾರ ಹೊಂದಿದವರಾಗಿರುತ್ತಾರೆ.

20) ಗ್ರಾಮೀಣ ಅಭ್ಯರ್ಥಿಗಳು:

ಗ್ರಾಮೀಣ ಅಭ್ಯರ್ಥಿ ಎಂದರೆ, ಒಂದು ಹುದ್ದೆಗಾಗಿ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ ಅಥವಾ ಉನ್ನತ ಪರೀಕ್ಷೆಯಾಗಿದ್ದಲ್ಲಿ 1ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಪ್ರಾಧಿಕಾರಿಯಿಂದ ದೃಡೀಕೃತ ಗ್ರಾಮೀಣ ಪತ್ರವನ್ನು ಲಗತ್ತಿಸತಕ್ಕದ್ದು. ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವವರು ಈ ಮೀಸಲಾತಿಯನ್ನು ಪಡೆಯಲು ಅರ್ಹರು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳನ್ನು ಕ್ಲೇಮ್ ಮಾಡುವ ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳು ನಮೂನೆ–2 ರ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ ಸೇರಿಲ್ಲದಿರುವ ಬಗ್ಗೆ ನಮೂನೆ–1 ರಲ್ಲಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ತಹಶೀಲ್ದಾರ್‌ರವರಿಂದ

ಪಡೆದು ಅದರ ಒಂದೊಂದು ಫೋಟೋ ಪ್ರತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು. ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, 2ಬಿ, 3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ–2 ರಲ್ಲಿ ನಿಗದಿತ ಪ್ರಾಧಿಕಾರಿಗಳಿಂದ ಪಡೆದು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಯವರಿಂದ ಮೇಲು ರುಜು ಮತ್ತು ಮೊಹರು ಮಾಡಿಸಿಕೊಂಡು ಅದರ ಒಂದು ಪ್ರತಿಯನ್ನು ಅಜಿಯೊಂದಿಗೆ ಲಗತ್ತಿಸತಕ್ಕದ್ದು.

21) <u>ಕನ್ನಡ ಮಾಧ್ಯಮ ಅಭ್ಯರ್ಥಿಗಳು:</u>

ಸರ್ಕಾರದ ಅಧಿಸೂಚನೆ ಸಂ:ಡಿಪಿಎಆರ್ 71 ಎಸ್ಆರ್ಆರ್ 2001. ದಿ:24–10–02 ರಲ್ಲಿ ಹೊರಡಿಸಿದ ಕರ್ನಾಟಕ ಸರ್ಕಾರಿ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು

1977 ರ ನಿಯಮ (9) (1)(ಸಿ) ರನ್ವಯ ಅಭ್ಯರ್ಥಿಯು 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆ ಎನ್ನುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಧ್ಯಾಯರ ಸಹಿ ಹಾಗೂ ಮೊಹರು ಮತ್ತು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

22) <u>ಅರ್ಹತಾ ಷರತ್ತುಗಳು:</u>

(ಅ) ಭಾರತೀಯ ನಾಗರೀಕನಾಗಿರತಕ್ಕದ್ದು.

(ಆ) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು.ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

(ಇ) ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ವಿವೇಚನೆಯನ್ನು ರಾಜ್ಯ ಸರ್ಕಾರವು ಕಾಯ್ದಿರಿಸಿಕೊಂಡಿದೆ ಮತ್ತು ಸರ್ಕಾರದ ವಿವೇಚನೆಯು ಯಾವುದೇ ವಿಧದಲ್ಲೂ ಈ ನಿಯಮಗಳ ಮೂಲಕ ಸೀಮಿತವಾಗಿರುವುದಿಲ್ಲ.

ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

23) ಈ ಕೆಳಕಂಡ ದಾಖಲೆಗಳನ್ನು ನಿಗದಿತ ನಮೂನೆಯ ಅರ್ಜಿಯ ಜೊತೆಗೆ ಲಗತ್ತಿಸಿದೆಯೇ ಎಂಬುದಾಗಿ ಅಭ್ಯರ್ಥಿಗಳು ಖಚಿತಪಡಿಸಿಕೊಳ್ಳುವುದು

* ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಯ ಅಂಕಪಟ್ಟಿ/ಪ್ರಮಾಣ ಪತ್ರ/ಕಂಪ್ಯೂಟರ್ ಜ್ಞಾನದ ಬಗ್ಗೆ ದಾಖಲೆ

* ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಪ್ರಮಾಣ ಪತ್ರ/ವರ್ಗಾವಣೆ ಪ್ರಮಾಣ ಪತ್ರ/ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉದ್ಧೃತ ಭಾಗ (Commulative Record)

* ಸೈನಿಕ ಸೇವೆಯಿಂದ ಬಿಡುಗಡೆಯಾದ/ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

* ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3ಬಿ ಯ ಪ್ರಮಾಣ ಪತ್ರಗಳು (ಮೀಸಲಾತಿ ಕೋರಿದ್ದಲ್ಲಿ)

* ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–1 ಮತ್ತು 2 ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)

* ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

* ಅಂಗವಿಕಲ ಮೀಸಲಾತಿ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

* ಯೋಜನೆಗಳಿಂದ ನಿರಾಶ್ರಿತರಾದ ಬಗ್ಗೆ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ)

* ವಿಧವೆಯಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ

ಮೇಲ್ಕಂಡಂತೆ ನಿಗದಿಪಡಿಸಿದ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

24) <u>ಇತರೆ ಸೂಚನೆಗಳು:</u>

1) ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಫೋಟೋ (ಜೆರಾಕ್ಸ್) ಪ್ರತಿಯನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಸೂಚಿಸಿದೆ.

2) ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ದಿನ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.

3) ಅಪೂರ್ಣ ಮಾಹಿತಿ ಇರುವ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು.

ವಿಪುಲ್ ಬನ್ಸಲ್,
ಜಿಲ್ಲಾಧಿಕಾರಿಗಳು,
ಚಿತ್ರದುರ್ಗ ಜಿಲ್ಲೆ.

ಪಿ.ಆರ್. 26